ಅಪರಂಜಿ

ಸೆಪ್ಟೆಂಬರ್ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಎಲ್.ಎಸ್. ಶೇಷಗಿರಿ ರಾವ್

ತೀ.ನಂ. ಶ್ರೀಕಂಠಯ್ಯ

ಕೆ.ವಿ. ಐಯ್ಯರ್

ಗೌತಮ

ಪರಮೇಶ್ವರ ಪುರಾಣಿಕ

ಬಿ.ಎಚ್. ಕುಲಕರ್ಣಿ

ಪ್ರಭಾ

ಸುಜಾತ ರಾಜಣ್ಣ

ನೀರಗುಂದ ಕೇಶವಮೂರ್ತಿರಾವ್

ಬಿಡಿ ಪ್ರತಿ: ರೂ. 10.00





ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 10.00
ವಾರ್ಷಿಕ ಚಂದಾ ರೂ. 100
ಹತ್ತು ವರ್ಷದ ಚಂದಾ ರೂ. 750
Ph: 23345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಸೆಪ್ಟೆಂಬರ್ - 2004 ಸಂಚಿಕೆ - 12

ಮುದ್ರಣ: ಇಂಪ್ರೆಸನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



೦ ಪ್ರಕಾಶ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಗರಣ ಬಯಲು

- ಸುದ್ದಿ

ಯಾರ ಅಭಿವೃದ್ಧಿ??

★★★

ತೈಲ ಬೆಲೆ ಏರಿಕೆ: ವಕೀಲರಿಂದ ಸೈಕಲ್ ರ‍್ಯಾಲಿ

- ಪತ್ರಿಕೆ

ಅರೆ, ಸೈಕಲ್‌ಗೇಕೆ ತೈಲ?!

★★★

ಸಿ.ಇ.ಟಿ. ಮಾಡುತ್ತಿರುವುದು ಏನು?

ಕೌನ್ಸಿಲಿಂಗ್ ಅಲ್ಲ ಕ್ಯಾನ್ಸಲಿಂಗ್!!

★★★

ದೇವರ ಹೆಸರಿನಲ್ಲಿ ಜನತೆಗೆ ವಂಚನೆ

- ಹೇಳಿಕೆ

ಜನತೆಯ ಹೆಸರಿನಲ್ಲಿ ದೇವರಿಗೆ ವಂಚನೆ ನಡೀತಾನೇ ಇದೆಯಲ್ಲ!

★★★

ಹಿಂದುತ್ವದಿಂದ ಹಿಂದೆ ಸರಿಯುವುದಿಲ್ಲ

- ವೆಂಕಯ್ಯ ನಾಯ್ಡು

ಈ ರೀತಿ ಹೇಳಿಕೆಗಳಿಂದಲೇ ಅದು ಹಿಂದೆ ಸರಿಯುವುದು!!

★★★

ಉನ್ನತ ವ್ಯಾಸಂಗಕ್ಕೆ ಸಾಲದ ನೆರವು

- ಶೀರ್ಷಿಕೆ

ಸಾಕಾಗುವಷ್ಟು ನೆರವು ನೀಡುವುದೇ ಒಳ್ಳೆಯದು!!

★★★

ಪೂಜಾರಿಗೆ ತಲೆ ಕೆಟ್ಟಿದೆ

- ಮಾಜೀ ಪ್ರಧಾನಿ

ಅಯ್ಯೋ ದೇವರೆ!!


★★★

ಕಂಪ್ಯೂಟರ್ ಕ್ಷೇತ್ರದಲ್ಲಿ ಕನ್ನಡ ಹಿಂದುಳಿದಿದೆಯೇ?

- ಪತ್ರಿಕೆ

ಇಲ್ಲ, ಕನ್ನಡ ಕ್ಷೇತ್ರದಲ್ಲಿ ಕಂಪ್ಯೂಟರ್ ಹಿಂದುಳಿದಿದೆ!

★★★



ನಮ್ಮ ನಿಮ್ಮಲ್ಲಿ


ಅಪರಂಜಿ ಬಳಗಕ್ಕೆ ಒಂದು ಸಂತಸದ ಸಿಹಿ ಸುದ್ದಿ. ನಮ್ಮ ಉಪ ಸಂಪಾದಕರಾದ ಶ್ರೀ ಬೇಲೂರು ರಾಮಮೂರ್ತಿ ಅವರಿಗೆ ಎರಡು ಸಾವಿರದ ಮೂರನೇ ಇಸವಿಯ ಪಡುಕೋಣೆ ರಮಾನಂದ ಪ್ರಶಸ್ತಿಯನ್ನು ನೀಡಲಾಗಿದೆ. ನಗೆ ಸಾಹಿತ್ಯಕ್ಕೆ ಇವರು ಸಲ್ಲಿಸಿರುವ ಸೇವೆಗಾಗಿ ಲಭಿಸಿರುವ ಈ ಪ್ರಶಸ್ತಿ ನಿಜಕ್ಕೂ ಅಪರಂಜಿಗೆ ಹೆಮ್ಮೆ ಎನ್ನಿಸುವ ಸಂಗತಿ. ವಿಪುಲವಾಗಿ ನಗೆ ಸಾಹಿತ್ಯವನ್ನು ಸೃಷ್ಟಿಸಿರುವ ಬೇಲೂರರ ನಗೆ ಪ್ರಜ್ಞೆ ಅತ್ಯಂತ ನವಿರಾದದ್ದು. ಇದನ್ನು ಇವರ ಬರಹಗಳನ್ನು ಓದಿಯೇ ಸವಿಯಬೇಕು. ಶ್ರೀಯುತರಿಗೆ ಇಂತಹ ಇನ್ನೂ ಅನೇಕ ಪ್ರಶಸ್ತಿಗಳು ಲಭಿಸಲಿ ಎಂದು ಅಪರಂಜಿ ಹಾರೈಸುತ್ತಾಳೆ. ಪ್ರಶಸ್ತಿ ಪ್ರದಾನ ಸಮಾರಂಭ 25-9-2004 ರಂದು ಸಂಜೆ 5 ಗಂಟೆಗೆ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದ ಆವರಣದಲ್ಲಿ ನಡೆಯಲಿದೆ. ನಟ ರತ್ನಾಕರ ಮಾ|| ಹಿರಣ್ಣಯ್ಯನವರು ಪ್ರಶಸ್ತಿ ಪ್ರದಾನ ಮಾಡುವರು. ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಶ್ರೀ ಹಂಸಲೇಖರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ನಿಮಗೆಲ್ಲಾ ಆದರದ ಆಹ್ವಾನ.


ಆಗಸ್ಟ್ ಹದಿನೈದರಂದು ನಾನು ಧಾರವಾಡದಲ್ಲಿದ್ದೆ. ಮನೋಹರ ಗ್ರಂಥಮಾಲೆಯವರ ವಾರ್ಷಿಕ ಪುಸ್ತಕ ಬಿಡುಗಡೆ ಸಮಾರಂಭವನ್ನು ಅಂದು ಧಾರವಾಡದಲ್ಲಿ ಏರ್ಪಡಿಸಲಾಗಿತ್ತು. ಬಿಡುಗಡೆಯಾದ ಪುಸ್ತಕಗಳಲ್ಲಿ ನಮ್ಮವರೇ ಆದ ಶೀನೂವಿನ ''ಹಳ್ಳ ಬಂತು ಹಳ್ಳ'' ಕಾದಂಬರಿಯೂ ಒಂದು. ಹಾಗಾಗಿ ಶೀನೂವಿನೊಂದಿಗೆ ನಾನೂ ಶುಕ್ರವಾರ ಸಂಜೆಯೇ ಬೆಂಗಳೂರು ಬಿಟ್ಟು ಶನಿವಾರ ಬೆಳಗ್ಗೆ ಧಾರವಾಡ ಸೇರಿದ್ದೆ. ಸಮಾರಂಭ ಇದ್ದದ್ದು ಭಾನುವಾರವಾದದ್ದರಿಂದ ಶನಿವಾರ ನಮ್ಮ ಮಟ್ಟಿಗೆ ಬಿಡುವಿನ ದಿನ. ''ನನ್ನ ಕಾದಂಬರಿಯ ಪ್ರಾರಂಭಿಕ ಘಟನೆಗಳೆಲ್ಲಾ ನವಲುಗುಂದ ಮತ್ತು ಅದರ ಆಸುಪಾಸಿನಲ್ಲಿ ನಡೆಯುತ್ತವೆ. ನೀನು ಕಾದಂಬರಿ ಓದುವುದಕ್ಕೆ ಪೂರ್ವಭಾವಿ ತಯಾರಿಗಾಗಿ ನವಲುಗುಂದಕ್ಕೆ ಹೋಗಿ ಬರೋಣ ಬಾ. ಇಲ್ಲಿಂದ ಐವತ್ತು ಕಿಲೋಮೀಟರುಗಳಿಗೂ ಕಡಿಮೆ ದೂರ ನವಲುಗುಂದ'' ಎಂದು ಶೀನೂ ನನ್ನನ್ನು ಆದರದಿಂದ ಆಹ್ವಾನಿಸಿದ. ಒಂದು ಕಾದಂಬರಿಯ ಕರ್ತೃ ತನ್ನ ಕೃತಿಗೆ ಈ ರೀತಿಯಾಗಿ ಒಂದು ಆಡಿಯೋ ವಿಷುಯಲ್ ಪ್ರಸ್ತಾವನೆ ನೀಡಲು ಮುಂದೆ ಬಂದಾಗ ಯಾರಾದರೂ ತಪ್ಪಿಸಿಕೊಳ್ಳುತ್ತಾರೆಯೇ? ಊಟ ಮುಗಿಸಿ ಮಧ್ಯಾಹ್ನವೇ ನವಲುಗುಂದಕ್ಕೆ ಹೊರಟೆವು.

ನವಲುಗುಂದ ಒಂದು ಪುಟ್ಟ ಗ್ರಾಮ. ಊರನ್ನು ಸೇರುತ್ತಿದ್ದಂತೆಯೇ ಬಲಭಾಗದಲ್ಲಿ ಕೆರೆಯ ದಿಣ್ಣೆ. ದಿಣ್ಣೆಯನ್ನು ಏರಲು ಅನುವಾಗುವಂತೆ ಮೆಟ್ಟಲುಗಳು. ಮೆಟ್ಟಲುಗಳ ತುದಿಯಲ್ಲಿ ಒಂದು ಕಮಾನು. ಮೇಲೆ ನಿಂತು ನೋಡಿದಾಗ ಕೆರೆಯ ಪೂರ್ಣ ಹರಹು ನಿಜಕ್ಕೂ ಒಂದು ರಮಣೀಯ ದೃಶ್ಯ. ಕೆರೆಯನ್ನು ನೋಡಿ, ಅಲ್ಲಿಂದ ಊರಿನ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನವನ್ನು ನೋಡಲು ಹೊರಟೆವು. ದೇವಸ್ಥಾನದ ಬಾಗಿಲು ಹಾಕಿತ್ತು. ಈ ದೇವಸ್ಥಾನಕ್ಕೆ ಒಂದು ಐತಿಹ್ಯವಿದೆ. ಕಳೆದ ಶತಮಾನದಲ್ಲಿ

(ಅಂದರೆ ಹತ್ತೊಂಭತ್ತನೆಯದು, ನಾವೆಲ್ಲಾ ಇನ್ನೂ ಇಪ್ಪತ್ತರ ಜನ ತಾನೇ) ಶೀನೂವಿನ ಪೂರ್ವಜರ ಮನೆಯ ಗೋಡೆಯಲ್ಲಿ ಅಮೃತಶಿಲೆಯಲ್ಲಿ ಕಡೆದ ಲಕ್ಷ್ಮೀನರಸಿಂಹ ಸ್ವಾಮಿಯ ಮೂರ್ತಿಯೊಂದು ಸಿಕ್ಕಿತಂತೆ. ಅದನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾರಂತೆ. ಕೀಲಿಯೊಂದಿಗೆ ಅರ್ಚಕರನ್ನು ಕರೆತರಲು, ನಾವು ಶೀನೂನ ಅಕ್ಕನ ಮನೆಗೆ ತೆರಳಿ ಅಲ್ಲಿಂದ ಒಬ್ಬ ಪಿಲ್ಲುವನ್ನು ಅರ್ಚಕರ ಮನೆಗೆ ಕಳುಹಿಸಿದೆವು. ಅವರ ಹಿಂತಿರುಗಿ ಬಂದು ''ಅರ್ಚಕರು ಚಾ ಕುಡೀತಾ ಅದಾರ. ಸ್ವಲ್ಪು ವ್ಯಾಳೀ ಕಳೆದು, ಗುಡೀಗೇ ಬರ್ತಾರಂತ'' ಎಂಬ ಸುದ್ದಿ ಮುಟ್ಟಿಸಿದ. ''ಕೀಲೀನಾರ ತರಬಾರದಿತ್ತೇನೂ'' ಎಂಬ ಪ್ರಶ್ನೆಗೆ, ''ಕೊಡುಲ್ಲಾ ಅಂದ್ರು'' ಎಂದು ಹೇಳಿ ಅವ ತನ್ನ ಆಟಕ್ಕೆ ಹೊರಟ. ನಾವು ಚಾ ಸೇವಿಸಿ, ಗುಡಿಗೆ ಹೊರಟೆವು. ಅರ್ಚಕರು ಬಂದಿದ್ದರು. ಪೂಜೆ ಚೆನ್ನಾಗಿ ನಡೆಯಿತು. ಬಹಳ ಸುಂದರವಾದ ಮೂರ್ತಿ ಅದು ಮಂಗಳಾರತಿ ಸ್ವೀಕರಿಸಿ ಹಿಂತಿರುಗುವಾಗ ಅರ್ಚಕರು ಶೀನೂವನ್ನು ಬದಿಗೆ ಕರೆದು ಏನೋ ಪಿಸುಗುಟ್ಟಿದರು. ಶೀನೂ ''ಏನೂ ಪರವಾಗಿಲ್ಲ'' ಎಂಬಂತೆ ತಲೆ ಆಡಿಸಿದ. ಆಮೇಲೆ ಶೀನೂ ನಮಗೆ ವಿಷಯ ತಿಳಿಸಿದ. ಯಾರೋ ಹಲವು ಭಕ್ತಾದಿಗಳು ಈ ಮೂರ್ತಿಯನ್ನು ಧಾರವಾಡಕ್ಕೆ ಒಯ್ದು ಅಲ್ಲಿ ಒಂದು ಗುಡಿಯನ್ನು ಸ್ಥಾಪಿಸಬೇಕೆಂದಿದ್ದಾರಂತೆ. ನವಲುಗುಂದದ ಜನ ಸ್ವಾಭಾವಿಕವಾಗಿಯೇ ಇದಕ್ಕೆ ವಿರುದ್ಧವಾಗಿದ್ದು, ಹೊರಗಿನಿಂದ ಗುಡಿಗೆ ಬರುವ ಅಪರಿಚಿತರನ್ನೆಲ್ಲಾ ಸಂಶಯದಿಂದ ನೋಡುವಂತಾಗಿದೆ, ಎಂದು ಅರ್ಚಕರು ಪೇಚಾಡಿಕೊಂಡರಂತೆ. ಮಾರನೆಯ ದಿನದ ಪುಸ್ತಕ ಬಿಡುಗಡೆ ಅದ್ದೂರಿಯಾಗಿ ನಡೆಯಿತು. ಪೂಜ್ಯ ಚೆನ್ನವೀರ ಕಣವಿಯವರು ಅಧ್ಯಕ್ಷತೆ ವಹಿಸಿದ್ದರು. ಶೀನೂ ತನ್ನ ಪುಸ್ತಕದಿಂದ ಒಂದು ಪುಟ್ಟ ಪ್ರಸಂಗ ಓದಿ ಹೇಳಿದ. ಜನ ಸಹಜವಾಗಿಯೇ ಮೆಚ್ಚಿಕೊಂಡರು. ತಮ್ಮ ಊರಿನ ಕಥೆ ಅಲ್ಲವೇ ಅದು. ಈ ಸಂಚಿಕೆ ನಿಮ್ಮ ಕೈಸೇರುವ ಹೊತ್ತಿಗೆ ಈ ಪುಸ್ತಕದ ಬಗ್ಗೆ ಬೆಂಗಳೂರಿನಿಂದ ಒಂದು ವಿಚಾರ ಸಂಕಿರಣ ಸಹಾ ಮುಗಿದು ಹೋಗಿರುತ್ತದೆ. ಪುಸ್ತಕವನ್ನು ಕೊಂಡು ಓದಿ. ನಿಜವಾಗಲು ಅದು eminently readable.

– ಶಿವಕುಮಾರ್





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಎಲ್.ಎಸ್. ಶೇಷಗಿರಿರಾವ್

20ನೇ ಶತಮಾನದ ಕರ್ನಾಟಕದಲ್ಲಿ ಸಾಹಿತ್ಯ ಸಂಶೋಧನೆಗಳಲ್ಲಿ ಬಹು ಗೌರವದ ಹೆಸರು ಪ್ರೊ. ತೀ.ನಂ. ಶ್ರೀಕಂಠಯ್ಯನವರದು. ಗಂಭೀರವಾದ, ಚಿಂತನಶೀಲವಾದ, ಅಧ್ಯಯನಕ್ಕೆ ಮುಡಿಪಾದ ಅವರ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಅವರ ಪ್ರಬಂಧಗಳಲ್ಲಿ ಕಾಣಬಹುದು.

'ಕಾಸಿನ ಸಂಘ' ಒಂದು ಇಡೀ ಸಮುದಾಯದ ಚಿತ್ರ. ಇದು ವಿದ್ವಾಂಸರಾದ ಇತರರಿಗೆ ಮಾರ್ಗದರ್ಶನ ಮಾಡುವ ಕಾಲೇಜಿನ ಅಧ್ಯಾಪಕ ಸಮುದಾಯ ಎನ್ನುವುದು ಬರಹದ ಹಾಸ್ಯಕ್ಕೆ ಇನ್ನಷ್ಟು ತಿರುಳನ್ನು ಒದಗಿಸುತ್ತದೆ. ಟೀಕೆಯ ಲೇಪವಿಲ್ಲದೆ ಮನುಷ್ಯ ಸಹಜ ದೌರ್ಬಲ್ಯವನ್ನು ಸಂತೋಷವಾಗಿ ನಗುನಗುತ್ತ ವೀಕ್ಷಿಸುವ ಅನುಭವ ಇಲ್ಲಿಯದು. ತಮ್ಮ ದೌರ್ಬಲ್ಯವನ್ನು ಮುಚ್ಚಿಡಲು ತಮ್ಮಿಂದ ಮುಚ್ಚಿಟ್ಟುಕೊಳ್ಳಲು ಅವರು ಕಂಡುಕೊಳ್ಳುವ ಉಪಾಯಗಳನ್ನು ನೋಡಬೇಕು. ಇವು ಬುದ್ಧಿವಂತರೂ ವಿದ್ಯಾವಂತರೂ ಆದವರಿಗೇ ಹೊಳೆಯುವ ಮಾರ್ಗಗಳು. ಇದರ ಒಳಗಡೆ - ಇಂದಿಗೂ ಕನ್ನಡಿಗರಿಗೆ ಅಂಟಿಕೊಂಡಿರುವ ಒಂದು ವಿಚಿತ್ರ ಅಸಾಮರ್ಥ್ಯವು ನಾವು ಯೋಚನೆ ಮಾಡುವಂತೆ ಪ್ರಚೋದಿಸುತ್ತದೆ.

ಕಾಸಿನ ಸಂಘ

- ತೀ.ನಂ. ಶ್ರೀಕಂಠಯ್ಯ

ಹಲವು ವರ್ಷಗಳ ಹಿಂದಿನ ಸಂಗತಿ. ಮೈಸೂರು ವಿಶ್ವವಿದ್ಯಾನಿಲಯದ ಒಂದು ಕಾಲೇಜಿನ ತರುಣ ಉಪಾಧ್ಯಾಯರಲ್ಲಿ ಕನ್ನಡವನ್ನು ಕುರಿತು ಹೊಸ ಉತ್ಸಾಹ ಮೂಡಿತ್ತು. ಕನ್ನಡ ಪಾಠವನ್ನು ಹೇಳುವವರಿಗೆ ಮಾತ್ರವಲ್ಲದೆ ಇಂಗ್ಲಿಷ್, ಸಂಸ್ಕೃತ, ದರ್ಶನ, ವಿಜ್ಞಾನ ಮೊದಲಾದವುಗಳ ಪ್ರವೀಣರಿಗೂ ಕನ್ನಡದ ಹುಚ್ಚು ಕೆರಳಿತ್ತು. ಕನ್ನಡದಲ್ಲಿ ಬರೆಯಬೇಕು, ಕನ್ನಡವನ್ನೇ ಆಡಬೇಕು ಎಂಬ ಹುಮ್ಮಸ್ಸು ಎಲ್ಲರಲ್ಲೂ ಹೊಮ್ಮುತ್ತಿತ್ತು. ಇಂಥ ಸುಸಮಯದಲ್ಲಿ ಒಂದು ದಿನ ಅಪರಾಹ್ನದ ವೇಳೆ, ಕಾಫಿಯ ಸೇವನೆ ನಡೆಯುತ್ತಾ ಹರಟೆ ಆಗುತ್ತಾ ಇರುವಾಗ, ಒಬ್ಬಿಬ್ಬರು ಉತ್ಸಾಹಿಗಳ ಗಮನ ತಮ್ಮೆಲ್ಲರ ಮಾತಿನ ಸ್ವರೂಪದ ಕಡೆಗೇ ಹೊರಳಿತು. ಎಂಥ ಮಾತು ಅದು! ಇತ್ತ ಕನ್ನಡವಲ್ಲ, ಅತ್ತ ಇಂಗ್ಲಿಷಲ್ಲ. ಅದೊಂದು ಹರುಕು ಮುರುಕು ಜಾತಿಯ ಬೆರಕೆ ನುಡಿ. ಆಡುವವನ ಆಲಸ್ಯವೇ ಇದರ ಮೂಲ ಸೂತ್ರ. ವಾಕ್ಯ ಇಂಗ್ಲಿಷಿನಲ್ಲಿ ಆರಂಭವಾಗಿ ಕನ್ನಡದಲ್ಲಿ ಕೊನೆ ಮುಟ್ಟಬಹುದು; ಅಥವಾ ಕನ್ನಡದಲ್ಲಿ ಮೊದಲಾಗಿ ಇಂಗ್ಲಿಷಿನ ಛಾಯೆಯನ್ನು ತಳೆದು ಕಡೆಗೆ ಕನ್ನಡಕ್ಕೇ ಇಳಿಯಬಹುದು. ಎಷ್ಟೋ ಸಲ ಅದು ವಾಕ್ಯವೇ ಆಗುತ್ತಿರಲಿಲ್ಲ; ಅಡಿಮುಡಿಯಿಲ್ಲದ ಶಬ್ದಗಳ ಸಂತೆಯಾಗಿ ಬಿಡುತ್ತಿತ್ತು, ಇಲ್ಲಿ ಕಲೆಯುತ್ತಿದ್ದ ಮಾತುಗಳಲ್ಲಿ ಇಂಗ್ಲಿಷಿನ ಪರಿಮಾಣವೇ ಹೆಚ್ಚು; ಹರುಕು ಬಟ್ಟೆಗೆ ತೇಪೆ ಹಾಕಿದಂತೆ ಅಲ್ಲೊಂದು ಇಲ್ಲೊಂದು ಕನ್ನಡ ಪದ ಅಥವಾ ಪ್ರತ್ಯಯ. Decide ಮಾಡು, Start ಆಗು - ಇಂಥ ನೂತನ ಧಾತುಗಳಿಂದ ಕನ್ನಡದ ಧಾತುಕೋಶ ಹಿಗ್ಗಲಿಸುತ್ತಿತ್ತು. ಇಷ್ಟೇ ಸಾಲದೆ, and, but, yet ಮೊದಲಾದ ಇಂಗ್ಲಿಷ್ ಅವ್ಯಯಗಳು ಕೂಡ ಸಂಕೋಚವಿಲ್ಲದೆ ಕನ್ನಡ ಪದಗಳೊಂದಿಗೆ ಸರಸವಾಡುತ್ತಿದ್ದವು. ಅಂತೂ ಕನ್ನಡ ಮಾತು ಹೊಳೆಯದಿದ್ದರೆ ಇಂಗ್ಲಿಷ್, ಇಂಗ್ಲಿಷ್ ಮಾತು ಹೊಳೆಯದಿದ್ದರೆ ಕನ್ನಡ, ಎರಡು ತಿಳಿಯದಿದ್ದರೆ ಅಂಗಚೇಷ್ಟೆ - ಹೀಗೆ ವ್ಯವಹಾರ ನಡೆಯುತ್ತಿತ್ತು. ಈ ವಿಚಿತ್ರ ವಾಗ್ಜಾಲಕ್ಕೆ. ಉದಾಹರಣೆಯನ್ನು ಬೇರೆಯಾಗಿ ಏಕೆ ಕೊಡಬೇಕು? ಇಂಗ್ಲಿಷಿನ ಬಳಕೆಯನ್ನು ಇಟ್ಟುಕೊಂಡಿರುವ ವಾಚಕರು ತಾವು ಆಡುವ ಮಾತನ್ನೇ ನಾಲ್ಕು ನಿಮಿಷ ಗಮನಿಸಿದರೆ ಸಾಕು!

ಭಾಷಾಭಿಮಾನದ ಅಂಜನವನ್ನು ಹಚ್ಚಿಕೊಂಡು ನೋಡತೊಡಗಿದ ಮೇಲೆ ನಮ್ಮ ಉತ್ಸಾಹಿಗಳಿಗೆ ಈ ಬಗೆಯ ಮಾತು ತುಂಬ ಹೊಲಸಾಗಿ ಕಂಡಿತು; ಇದನ್ನು ಆಡಿ ಆಡಿ ಅಪವಿತ್ರವಾದ ನಾಲಗೆಯನ್ನು ಯಾವ ದರ್ಭೆ ಹಾಕಿ ಸುಟ್ಟರೆ ತಾನೆ ಶುದ್ಧಿಯಾದೀತು ಎನ್ನಿಸಿತು. ವಿಶ್ವಸಾಹಸ ಮಾಡಿ ಈ ಕಲಬೆರಕೆಯ ನುಡಿಯನ್ನು ಹೊರದೂಡಬೇಕು, ಕನ್ನಡವನ್ನು ಆದಷ್ಟು ಶುದ್ಧವಾಗಿ ಆಡಬೇಕು ಎಂಬ ಕೆಚ್ಚು ಬಲಿಯಿತು. ಒಬ್ಬರಿಂದೊಬ್ಬರು ಮಾತಾಡಿಕೊಂಡು ಉತ್ಸಾಹವನ್ನು ಉದ್ದೀಪಿಸಿಕೊಂಡರು; ನಿಶ್ಚಯವನ್ನು ದೃಢಪಡಿಸಿಕೊಂಡರು; ಹೊಸ ಪ್ರತಿಜ್ಞೆಯನ್ನು ಹೂಡಿ ಹೊಸದೊಂದು ಸಂಘವನ್ನು ಕಟ್ಟಿದರು.

ಸಂಘದ ಜೀವಸೂತ್ರ ಇಷ್ಟೇ! ''ಕನ್ನಡವನ್ನು ಆಡುವಾಗ ಅದರಲ್ಲಿ ಇಂಗ್ಲಿಷ್ ಮಾತನ್ನು ಬೆರಸಕೂಡದು'' ಸೂತ್ರ ಎಷ್ಟೇ ಸರಳವಾಗಿರಲಿ, ಅದಕ್ಕೆ ವೃತ್ತಿ ವ್ಯಾಖ್ಯಾನಗಳು ಇರಲೇಬೇಕಷ್ಟೇ? ಇಲ್ಲಿ ಕೂಡ, ಸಂಘದ ಗುರಿಗೆ ಭಂಗ ಬಾರದಂತೆ, ಸದಸ್ಯರನ್ನು ಅನಾವಶ್ಯಕವಾದ ನಿರ್ಬಂಧಗಳಿಗೆ ಒಳಪಡಿಸದಂತೆ, ಸೂತ್ರದ ಅರ್ಥವನ್ನು ಪರಿಷ್ಕರಿಸಿದರು, ನಿಯಮಾವಳಿಗಳನ್ನು ಏರ್ಪಡಿಸಿದರು. ಇಂಗ್ಲಿಷನ್ನು ಶುದ್ಧಾಂಗವಾಗಿ ವರ್ಜಿಸಿಬಿಡಬೇಕೆಂಬ ಅಭಿಪ್ರಾಯ ಯಾರಿಗೂ ಇರಲಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷಿನ ಮೂಲಕ ಪಾಠ ಪ್ರವಚನಗಳನ್ನು ಹೇಳುತ್ತಾ, ಇಂಗ್ಲಿಷ್ ಪುಸ್ತಕಗಳನ್ನೇ ಹಗಲು ಇರಳೂ ಓದುತ್ತಾ, ಇಂಗ್ಲಿಷನ್ನೇ ಜೀವನಕ್ಕಾಗಿ ಅವಲಂಬಿಸಿದ್ದವರಿಗೆ ''ನಿವು ಇಂಗ್ಲಿಷಿನ ವ್ಯವಹಾರವನ್ನೇ ಬಿಡಬೇಕು'' ಎಂದು ಹೇಳಬಹುದೇ? ಹಾಗೆ ಹೇಳಿದರೆ ಅವರು ಕೇಳಿಯಾರೆ? ಸಂಘ ಯಾವ ಭಾಷೆಯನ್ನು ಬಿಡಬೇಕೆನ್ನಲಿಲ್ಲ. ಕನ್ನಡವನ್ನು ಆಡುವಾಗ ಅದರಲ್ಲಿ ಇಂಗ್ಲಿಷ್ ಮಾತನ್ನು ಸೇರಿಸಕೂಡದೆಂದು ಮಾತ್ರ ಕಟ್ಟಳೆ ಮಾಡಿತು. ಹೀಗೆಂದರೆ ಇಷ್ಟೇ ಅರ್ಥ: ಒಂದು ವಾಕ್ಯವನ್ನು ಕನ್ನಡದಲ್ಲಿ ಪ್ರಾರಂಭ ಮಾಡಿದರೆ ಕನ್ನಡದಲ್ಲೇ ಕೊನೆತನಕ ನಿರ್ವಾಹ ಮಾಡಬೇಕು; ನಡುವೆ ಇಂಗ್ಲಿಷಿಗೆ ತಿರುಗಿಸಕೂಡದು. ಇಂಗ್ಲಿಷಿಗೂ ಇದರಿಂದ ಒಂದು ಪ್ರಯೋಜನ ಲಭಿಸಿತು; ಇಂಗ್ಲಿಷಿನಲ್ಲಿ ವಾಕ್ಯವನ್ನು ಮೊದಲ ಮಾಡಿದರೆ ಅದನ್ನು ಇಂಗ್ಲಿಷಿನಲ್ಲೇ ಸಾಗಿಸಬೇಕು; ನಡುವೆ ಕನ್ನಡವನ್ನು ತರಬಾರದು. ಈ ಪರಿಷ್ಕಾರವನ್ನು ಕೇಳಿದ ಕೂಡಲೇ ಸದಸ್ಯರನೇಕರಿಗೆ ಸಂಘದ ವಿಷಯದಲ್ಲಿ ಕೃತಜ್ಞತೆ ಹೆಚ್ಚಾಯಿತು. ಏಕೆಂದರೆ ಈ ನಿಯಮವನ್ನು ಅನುಸರಿಸುವುದರಿಂದ ತಮ್ಮ ಕನ್ನಡ ಮಾತು ಶುದ್ಧವಾಗುವುದರ ಜೊತೆಗೆ ಇಂಗ್ಲಿಷ್ ಮಾತೂ ತನ್ನಷ್ಟಕ್ಕೆ ತಾನೇ ಶುದ್ಧವಾಗುವುದೆಂದು ಅವರಿಗೆ ಸುಲಭವಾಗಿ ಮನವರಿಕೆಯಾಯಿತು. ಇನ್ನು ಈ ಏಕಭಾಷಾ ನಿಯಮಕ್ಕೆ ಕೂಡ ಉದಾರವಾಗಿಯೇ ಅರ್ಥ ಮಾಡಿದರು. ಕನ್ನಡದೊಂದಿಗೆ ಇಂಗ್ಲಿಷನ್ನು ಬೆರಸಬಾರದೆಂದರೆ, ಎರಡು ಘಂಟೆಯ ಕಾಲದ ಮಾತುಕತೆಯಲ್ಲಿ ಮೊದಲಿನಿಂದ ಕೊನೆಯ ತನಕ ಕೇವಲ ಕನ್ನಡವನ್ನೇ ಅಥವಾ ಕೇವಲ ಇಂಗ್ಲಿಷನ್ನೇ ಪಟ್ಟು ಹಿಡಿದು ಆಡಬೇಕೆಂದಲ್ಲ. (ಇಂಥ ಕಠೋರ ಸಂಯಮಕ್ಕೆ ಯಾರೂ ಸಿದ್ಧವಾಗಿರಲಿಲ್ಲ!) ವಿಧಿ ಅನ್ವಯಿಸುವದು ಬಿಡಿ ವಾಕ್ಯಕ್ಕೇ ಹೊರತು ವಾಕ್ಯ ಸಮುದಾಯಕ್ಕಲ್ಲ. ಆದಕಾರಣ ಒಂದು ವಾಕ್ಯವನ್ನು ಕನ್ನಡದಲ್ಲಿ ಪ್ರಾರಂಭಿಸಿ ಕನ್ನಡದಲ್ಲೇ ಮುಗಿಸಿದ ಬಳಿಕ ಮುಂದಿನ ವಾಕ್ಯಕ್ಕೇ ಇಂಗ್ಲಿಷನ್ನು ಶರಣು ಹೊಕ್ಕರೆ ಅದು ನಿರ್ದಿಷ್ಟವೆಂದೇ ಒಪ್ಪಿಕೊಳ್ಳಲಾಯಿತು.

ಇದಿಷ್ಟೂ ವಾಕ್ಯವಿಚಾರ, ಒಂದು ಪದ ಇಂಗ್ಲಿಷಿನದೇ ಅಲ್ಲವೇ ಎಂಬುದನ್ನು ನಿರ್ಧರಿಸುವುದರಲ್ಲೂ ನಿಯಮ ಅನುಕೂಲವಾಗಿಯೇ ಏರ್ಪಟ್ಟಿತು. ಈಗ ಮನೆ ಮಾತಿನಲ್ಲಿ ಕೂಡ ರೈಲು, ಮೋಟಾರು, ಕೋರ್ಟು, ಕಾಲೇಜು ಮೊದಲಾದ ಪದಗಳನ್ನು ಧಾರಾಳವಾಗಿಯೇ ಉಪಯೋಗಿಸುತ್ತಾರೆ. ಹೀಗೆ ಕನ್ನಡದ ಕುಲಕ್ಕೆ ಸೇರಿ ಹೋಗಿರುವ ಪದಗಳನ್ನು ಕಿತ್ತೊಗೆದು, ಹೊಗೆಬಂಡಿ (ಅಥವಾ ಧೂಮಶಕಟ), ನ್ಯಾಯಾಸ್ಥಾನ ಮೊದಲಾದವನ್ನು ಬಳಸಬೇಕೆಂದು ಯಾರನ್ನೂ ಒತ್ತಾಯ ಪಡಿಸುತ್ತಿರಲಿಲ್ಲ. ಇದರಂತೆ

English ಎಂಬ ಪದ ಕನ್ನಡದಲ್ಲಿ 'ಇಂಗ್ಲಿಷ್'' ಆಗಿಯೇ ಉಳಿಯಿತು; ''ಆಂಗ್ಲೇಯ ಭಾಷೆ''ಯಾಗಿಯೊ ''ಅಂಗ್ರೇಜಿ'' ಯಾಗಿಯೊ ಅವತಾರ ತಾಳಲಿಲ್ಲ. ಕೆಲವು ಇಂಗ್ಲಿಷ್ ಪದಗಳಿಗೆ ಸರಿಯಾಗಿ ಪ್ರತಿ ಪದಗಳು ಮಾತನಾಡುವವನಿಗೆ ಥಟ್ಟನೆ ಹೊಳೆಯದಿರಬಹುದು; ಅಥವಾ ಕನ್ನಡದಲ್ಲಿ ಇನ್ನೂ ಸೃಷ್ಟಿಯಾಗದೇ ಇರಬಹುದು. ಅಂಥ ಕಡೆ ತಾನು ಉಪಯೋಗಿಸುವ ಪದ ಇಂಗ್ಲಿಷಿನದೆಂಬ ಎಚ್ಚರಿಕೆ ವಕ್ತೃವಿಗೆ ಇದ್ದರೆ ಸಾಕು; ''ಇಂಗ್ಲೀಷಿನಲ್ಲಿ Constitution ಅನ್ನುತ್ತಾರಲ್ಲ ಅದು...'' ''Telepathy ಎನ್ನುವುದರ ಮೂಲಕ....'' ''Transcendentalism ಎಂದು ಹೇಳುವುದಿಲ್ಲವೇ, ಆ ವಾದದಲ್ಲಿ....'' ಹೀಗೆ ಅನುವಾದಿಸಿದರೆ ದೋಷವಿಲ್ಲವೆಂದು ಅಂಗೀಕಾರವಾಯಿತು.

ಕನ್ನಡವನ್ನು ಆಡುವಾಗ ಅವಶ್ಯಬಿದ್ದ ಇಂಗ್ಲಿಷ್ ಪದಕ್ಕೆಲ್ಲ, ಪ್ರತಿ ಪದವನ್ನು ಅಚ್ಚಗನ್ನಡದಲ್ಲಿಯೇ ಹುಡುಕಬೇಕೆಂಬ ವೀರಾವೇಶವೂ ಇರಲಿಲ್ಲ. ಮೂಲ ಸೂತ್ರದ ಮೇರೆಗೆ ಬಹಿಷ್ಕಾರ ಇಂಗ್ಲಿಷಿಗೇ ಹೊರತು. ಸಂಸ್ಕೃತ, ಹಿಂದೂಸ್ತಾನಿ, ತಮಿಳು, ಮರಾಠಿ ಮೊದಲಾದ ಬೇರೆ ಯಾವ ಭಾಷೆಗೂ ತಟ್ಟಲಿಲ್ಲ. "He was arrested" ಎನ್ನುವುದನ್ನು ಕನ್ನಡದಲ್ಲಿ ''ಅವನನ್ನು ಸೆರೆಹಿಡಿದರು'' ಎಂದು ಹೇಳಬೇಕಾಗಿರಲಿಲ್ಲ. ''ಅವನನ್ನು ದಸ್ತಗಿರಿ ಮಾಡಿದರು'' ಎಂದರೆ ಸಾಕಾಗಿತ್ತು. ಇಂಗ್ಲಿಷನ್ನುಳಿದ ಮಿಕ್ಕ ಭಾಷೆಗಳಿಗೆಲ್ಲ - ಮುಖ್ಯವಾಗಿ ಹಿಂದೂಸ್ಥಾನಿಗೆ - ಕನ್ನಡದ ಹೆಬ್ಬಾಗಿಲು ತೆರೆದೇ ಇತ್ತು; ಹುಕುಂ, ಕಛೇರಿ, ಜಬರದಸ್ತು, ಷೋಕಿ, ರಿಯಾಯಿತಿ, ಬಡಾವಣೆ - ಈ ಪರಂಪರೆಗೆ ಯಾವ ತಡೆಯೂ ಇರಲೇ ಇಲ್ಲ.

ಇಷ್ಟು ಉದಾರೋದಾರವಾದ ನಿಯಮಗಳೊಡನೆ - ''ನಿಯಮ''ವೆಂಬ ಹೆಸರಿಗೇ ಅರ್ಹವಲ್ಲದಷ್ಟು ಸಡಿಲವಾದ ನಿಯಮಗಳೊಡನೆ - ಉತ್ಸಾಹದ ಕೋಲಾಹಲದಲ್ಲಿ ಸಂಘ ಜನ್ಮವೆತ್ತಿತು. ಮೂಲ ಸೂತ್ರವನ್ನು ಒಮ್ಮೆ ಮನನ ಮಾಡಿದರೆ ಸಾಕು, ಅದನ್ನು ಯಾರೂ ಮುರಿಯುವ ಸಂಭವವೇ ಇಲ್ಲವೆಂದು ಎಲ್ಲರ ಭಾವನೆ. ಆದರು ಸಂಶಯಾತ್ಮರೊಬ್ಬರು ಸಂಘದ ನಿಯಮಾವಳಿಯಲ್ಲಿ ಶಿಕ್ಷೆಯ ''ಕಲಂ'' ಸೇರಿದ್ದರೆ ಒಳ್ಳೆಯದೆಂದು ಮೆಲ್ಲಗೆ ಸೂಚಿಸಿ ಅದನ್ನು ಹೇಗೋ ಮಂಜೂರು ಮಾಡಿಸಿಬಿಟ್ಟರು: ''ಒಂದು ಕನ್ನಡ ವಾಕ್ಯದಲ್ಲಿ ಇಂಗ್ಲಿಷ್ ಪದಗಳನ್ನು ಸೇರಿಸಿದರೆ, ಹಾಗೆ ಸೇರಿಸಿದ ಪ್ರತಿಯೊಂದು ಪದಕ್ಕೂ ಒಂದು ಕಾಸಿನಂತೆ ಜುಲ್ಮಾನೆ ಕೊಡತಕ್ಕದ್ದು'' ವಿಧಿಯನ್ನು ಮುರಿಯಬಹುದೆಂಬ ಶಂಕೆಯೇ ಯಾರಿಗೂ ಇರಲಿಲ್ಲ; ಒಂದು ವೇಳೆ ಅಪೂರ್ವವಾಗಿ ಮುರಿದರೂ, ಶಿಕ್ಷೆ ಅತ್ಯಲ್ಪ.

ಸಂಘದ ಕೆಲಸಕ್ಕೆ ಮೊದಲಾಯಿತು. ಸದಸ್ಯರು ನಿರೀಕ್ಷಿಸಿದ್ದಕ್ಕೆ ವಿರೋಧವಾಗಿ ಅವರ ಕಷ್ಟನಷ್ಟಗಳಿಗೂ ಮೊದಲಾಯಿತು:

ಒಬ್ಬರು: As I was saying, ಈ essay ನಲ್ಲಿ he has peretrated impossile blunders.

ಇನ್ನೊಬ್ಬರು: ಠಾಳಿ ಠಾಳಿ ಸ್ವಾಮಿ, ನೀವು ಹತ್ತು ಕಾಸು fine ಕೊಡಬೇಕು.

ಮೊದಲನೆಯವರು: ಅದು ಹೇಗೆ? ಉದ್ದಕ್ಕೂ I have been using English only

ಎರಡನೆಯವರು: ಇನ್ನೂ ರು ಕಾಸು ನಿಮ್ಮ accountಗೆ ಏರಿತು.

ಮೂರನೆಯವರು: ಸ್ವಾಮಿ ಸಗದಿ ಗಮಾಸ್ತರೆ, ನಿಮ್ಮ ಲೆಕ್ಕಕ್ಕು ಎರಡು ಕಾಸು ಸೇರಿತು!

ಈ ಬಗೆಯ ಸಂವಾದಗಳಿಗೆ ಅವಕಾಶವುಂಟಾಯಿತು. ಇಷ್ಟೊಂದು ದುಡ್ಡನ್ನು ತಾವು ಏಕೆ ತೆರಬೇಕೆಂದು ಮೊದನೆಯವರಿಗೆ ಇನ್ನೂ ಅರಿವಾಗಲೊಲ್ಲದು. ವಾಕ್ಯ ಇಂಗ್ಲಿಷಿನಲ್ಲೇ ಪ್ರಾರಂಭವಾದರೂ ಆದರಲ್ಲಿ ಕನ್ನಡ ಮಾತು ತಲೆ ಹಾಕಿದರೆ ಅದನ್ನು ಕನ್ನಡ ವಾಕ್ಯವೆಂದೇ ಭಾವಿಸಬೇಕೆಂದೂ ಒಂದು ಉಪ ನಿಯಮ ಒಪ್ಪಿಗೆ ಪಡೆದಿತ್ತು. ಇದು ಉಚಿತವೇ ತಾನೆ. ಸಂಘದ ಮೂಲೋದ್ದೇಶದ ಕನ್ನಡದ ಶುದ್ಧಿಯೇ ಹೊರತು ಇಂಗ್ಲಿಷಿನ ಸಂರಕ್ಷಣೆಯಲ್ಲವಲ್ಲ! ಆದಕಾರಣ, ಇಂಗ್ಲಿಷ್ ವಾಕ್ಯದಲ್ಲಿ ಕನ್ನಡ ಸೇರಿತೆಂದು ಶಿಕ್ಷೆ ವಿಧಿಸುವ ಬದಲು ಅಲ್ಲಿ ಕನ್ನಡದೊಂದಿಗೆ ಬೆರಕೆಯಾಗಿದ್ದ ಇಂಗ್ಲಿಷ್ ಪದಗಳನ್ನೇ ತಪ್ಪಿನ ಲೆಕ್ಕಕ್ಕೆ ತೆಗೆದುಕೊಳ್ಳುವುದು ಸೂಕ್ತವೆಂದು ಎಲ್ಲರೂ ಅಂಗೀಕರಿಸಿದ್ದರು. ಇದೇ ಹಲವು ಮಂದಿ ವಾಕ್ಚತುರರ ಗಂಟಲ ಗಾಣವಾಯಿತು. ತಾವು ಇಂಗ್ಲಿಷ್ ಭಾಷಾ ವಿಶಾರದರೆಂದು ಭಾವಿಸಿಕೊಂಡು ಪರಮಾಣುವಿನಿಂದ ಪರಮಾತ್ಮನವರೆಗೂ ಆಚೆಗೂ ಎಲ್ಲ ವಿಷಯಗಳ ಮೇಲೆ ಲೀಲಾಜಾಲವಾಗಿ ಉಪನ್ಯಾಸ ಕೊಚ್ಚುತ್ತಿದ್ದವರಿಗೆ ಈಗ ಅಚ್ಚ ಇಂಗ್ಲಿಷಿನಲ್ಲಿ ಮಾತಾಡುವುದು ಅಚ್ಚಗನ್ನಡದಷ್ಟೇ ಕಷ್ಟವೆಂದು ಅನುಭವಕ್ಕೆ ಬರತೊಡಗಿತು. ಇಂಥವರನೇಕರು ತಮ್ಮ ಆರ್ಥಿಕ ಹಿತಕ್ಕಾಗಿ ಕ್ರಿಕೆಟ್ ಆಟವನ್ನು ಸ್ಮರಿಸಿಕೊಂಡರು. ಅಲ್ಲಿ ಚೆಂಡನ್ನು ಎಷ್ಟೇ ದೂರಕ್ಕೆ ಹೊಡೆದರೂ ''ಸೀಮೆ'' (Boundary) ಯನ್ನು ದಾಟಿದ್ದಕ್ಕೆ ಪರಮಾವಧಿಯ ಫಲ ಇಷ್ಟೇ ಓಟ ಎಂದು ಕ್ಲುಪ್ತ ಮಾಡಿಲ್ಲವೆ. ಅದೇ ರೀತಿ, ವಾಕ್ಯ ಎಷ್ಟೇ ಉದ್ದವಾಗಿರಲಿ, ಮಿಶ್ರಣ ಎಷ್ಟೇ ಘೋರವಾಗಿ ನಡೆದಿರಲಿ, ಅದನ್ನು ಲಕ್ಷಿಸದೆ ಒಂದು ವಾಕ್ಯಕ್ಕೆ ಒಂದೇ ''ಸೀಮೆ'' ಎಂದು ಪರಿಗಣಿಸಿ ಅದಕ್ಕೆ ಮೂರು ಕಾಸಿನ ದಂಡವನ್ನು ಮಾತ್ರ ವಿಧಿಸಬೇಕೆಂಬ ರಿಯಾಯಿತಿ ಹೊಸದಾಗಿ ಹುಟ್ಟಿತು. ಆದರೆ ಇದರಿಂದ ಕಾಸಿನ ಲೆಕ್ಕವೇನೂ ಕಡಿಮೆಯಾಗಲಿಲ್ಲ. ಎಲ್ಲರ ಬಾಯಲ್ಲೂ ''ಸೀಮೆ''ಗಳ ಸುರಿಮಳೆ! ಇನ್ನು ಸಂಘದ ನಿಯಮ ರಕ್ಷಕರ ಉಕ್ತಿಗಳಲ್ಲೂ ಸ್ವಾರಸ್ಯವಿರುತ್ತಿತ್ತು. ಇನ್ನೊಬ್ಬರು ತಪ್ಪು ಮಾಡುವುದನ್ನೇ ರಣಹದ್ದಿನಂತೆ ನಿರೀಕ್ಷಿಸುತ್ತಾ, ಮಾತು ಹೊರಟ ಕೂಡಲೆ ಕಾಸಿನ ಲೆಕ್ಕವನ್ನು ಕೂಗುತ್ತಿದ್ದವರಿಗೆ ಈ ಉತ್ಸಾಹೋದ್ರೇಕದಲ್ಲಿ ತಮ್ಮ ಮಾತಿನ ಮೇಲಿನ ಎಚ್ಚರವೇ ಎಷ್ಟೋ ಸಲ ತಪ್ಪಿ ಅವರ ಕೈಯಿಂದಲೂ ಕಾಸು ಬೀಳುತ್ತಿತ್ತು.

ಸಂಘದ ನಿಯಮಗಳನ್ನು ಅನ್ವಯಿಸುವಾಗ ಕೆಲವು ಸಮಸ್ಯೆಗಳು ಸಹಜವಾಗಿ ತಲೆಯೆತ್ತಿದವು. ''ರೂಮು'' (Room) ಕನ್ನಡಕ್ಕೆ ಸೇರಿದ್ದೇ ಅಲ್ಲವೆ? ಇದುವರೆಗೆ Teachers's room ಎನ್ನುತ್ತಿದ್ದವರು ಈಗ ''ಉಪಾಧ್ಯಾಯರ ಕೊಠಡಿ'' ಎಂದರೆ

ಕಾಲೇಜಿನ ಜವಾನರು ಮುಖಮುಖ ನೋಡುತ್ತಾರಲ್ಲ! ದರ್ಜಿ ಅಂಗಡಿಗೆ ಹೋದಾಗ Silk, Woollen cloth ಎನ್ನುವ ಬದಲು ''ರೇಷ್ಮೆ, ತುಪಟದ ಬಟ್ಟೆ'' ಎಂದೇ ಹೇಳಬೇಕೆ? Stiff ಎನ್ನುವುದಕ್ಕೆ ಸಮಾನ ಪದ ಏನು? ಒಂದು ವೇಳೆ ''ಇಸ್ತ್ರೀಪು'' ಎಂದರೆ ನಮ್ಮ ಮಾನಕ್ಕೆ ತಡೆಯುತ್ತದೆಯೇ? ದರ್ಜಿಯೇ ನಗುತ್ತಾನೋ ಏನೋ? ಅವನಿಗೆ ಕೋಪ ಬಾರದಿರಬೇಕಾದರೆ ಅವನನ್ನು Tailor ಎಂದೇ ಕರೆಯಬೇಕಲ್ಲವೆ? Collar ಎಂದು ಹೇಳಿ ಹೇಳಿ ಅಭ್ಯಾಸವಾಗಿರುವಾಗ ''ಕೊರಳುಪಟ್ಟಿ'' ಎನ್ನುವುದಕ್ಕೆ ಹೋದರೆ ಗಂಟಲು ಬಿಗಿಯದೆ ಇರುತ್ತದೆಯೆ? Belt ಎನ್ನಬಹುದೋ, ಇಲ್ಲವೆ ''ಸೊಂಟಪಟ್ಟಿ'' ಎಂದು ಹೇಳಿ ನಗುಪಾಟಲಾಗಬೇಕೋ? ''ಹೋಟಲು'' ಕನ್ನಡ ಪದ, ಸರಿ, ಹೋಟಲಿನ ಮಾಣಿಗೆ ''ಎರಡು ಪ್ಲೇಟ್ ಬೋಂಡ, ಎರಡು ಕಪ್ ಕಾಫಿ'' ಎಂದು ಯಾವ ಮುಖದಿಂದ ಹೇಳುವುದು? ಹೀಗೆ ಮಾನ ಹೋಗುವ ಕಡೆಗಳಲ್ಲಾದರು ವಿನಾಯಿತಿ ಬೇಡವೆ? - ಇಂಥ ಪ್ರಶ್ನೆಗಳು ಘಂಟೆ ಘಂಟೆಗೂ ಏಳುತ್ತಿದ್ದವು. ಇವುಗಳ ನಿರ್ಣಯವನ್ನು ಕನ್ನಡ ಜನ ಕೊನೆಗೆ ಹೇಗಾದರೂ ಮಾಡಲಿ, ಸದ್ಯಕ್ಕೆ ಒಂದು ತೀರ್ಪನ್ನು ಕೊಟ್ಟು ಕಾಸಿನ ಲೆಕ್ಕದ ವ್ಯವಸ್ಥೆಯನ್ನು ಉಳಿಸುವುದಕ್ಕೆ ಒಬ್ಬ ಹೊಣೆಗಾರನು ಬೇಕಾದನು. ಅಲ್ಲದೆ ಇಂಗ್ಲಿಷಿನ ಕಠಿಣ ಪದಗಳಿಗೆ ಪ್ರತಿ ಪದಗಳನ್ನು ಹುಡುಕಿ ತರುವ ಕ್ಲೇಶವನ್ನು ಯಾರಾದರು ಒಬ್ಬನಿಗೆ ವಹಿಸಿ ಬಿಡುವುದರಲ್ಲಿ ಸೌಕರ್ಯವುಂಟೆಂದು ಹಲವು ಮಂದಿ ಸದಸ್ಯರಿಗೆ ತೋರಿತು. ಇಷ್ಟರ ಮೇಲೆ ಸಂಘದ ಹಣಕಾಸಿನ ಲೆಕ್ಕವನ್ನು ಇಟ್ಟು ಅದನ್ನು ವಸೂಲ ಮಾಡುವ ಕರ್ತವ್ಯವನ್ನು ಒಬ್ಬಿಗೆ ಒಪ್ಪಿಸಬೇಕಾಗಿತ್ತು. ಈ ಕೋಟಲೆಗಳನ್ನೆಲ್ಲಾ ಒಟ್ಟಿಗೆ ಪೋಣಿಸಿ ''ವಿಧಾಯಕ''ನೆಂಬ ಹೆಮ್ಮೆಯ ಹೆಸರನ್ನು ಕುಚ್ಚುಗಟ್ಟಿ, ಈ ಮುಳ್ಳಿನ ಮಾಲಿಕೆಯನ್ನು ಒಬ್ಬಾತನ ಕೊರಳಿಗೆ ಹಾಕಿಬಿಟ್ಟರು.

ಈ ವಿಧಾಯಕನಿಗೆ ಸಂಘದ ಅಭಿವೃದ್ಧಿಯ ವಿಷಯದಲ್ಲಿ ಹೇರಳವಾದ ಆಸಕ್ತಿಯಿತ್ತು. ಈಗಲಂತೂ ತನ್ನ ಕರ್ತವ್ಯವನ್ನು ವ್ರತದಂತೆ ಕೈಕೊಂಡನು. ಮೊದಲ ತಿಂಗಳಲ್ಲಿ ವಸೂಲಾದ ತಪ್ಪು ಕಾಣಿಕೆಯ ಹಣಕ್ಕೆ ಅಂದವಾದ ರಟ್ಟಿನ ಕೈ ಪುಸ್ತಕಗಳನ್ನು ಕೊಂಡು ತಂದು ಸದಸ್ಯರಿಗೆಲ್ಲ ''ಒದಿಸಿ'' ಅವುಗಳಲ್ಲಿ ಪ್ರತಿಯೊಬ್ಬರೂ ತಮ್ಮ ಮತ್ತು ಉಳಿದವರ ತಪ್ಪುಗಳ ಲೆಕ್ಕವನ್ನು ಗುರುತು ಮಾಡಿ ತಿಂಗಳ ಕೊನೆಯಲ್ಲಿ ಲೆಕ್ಕ ಒಪ್ಪಿಸಬೇಕೆಂದು ನೇಮಿಸಿದನು. ತನ್ನ ಪುಸ್ತಕದಲ್ಲಿ ಬಿಡಿ ಲೆಕ್ಕ ಒಟ್ಟು ಲೆಕ್ಕಗಲಿಗು ಕಠಿಣ ಪದಗಳ ಅರ್ಥಕ್ಕೂ ಸಮಸ್ಯೆಗಳ ಚರ್ಚೆಗೂ ಬೇರೆ ಬೇರೆ ಪುಟಗಳನ್ನು ಮೀಸಲಾಗಿಟ್ಟನು. ಮಿತ್ರರೆನ್ನದೆ ಉದಾಸೀನರೆನ್ನದೆ ಎಲ್ಲರ ತಪ್ಪುಗಳನ್ನೂ ನಿರ್ದಾಕ್ಷಿಣ್ಯವಾಗಿ ಉಲ್ಲೇಖಿಸಲು ತೊಡಗಿದನು. ಅದೇ ರೀತಿ ಮಾಡಬೇಕೆಂದು ಮಿಕ್ಕವರನ್ನು ಬೇಡಿಕೊಂಡನು, ಒತ್ತಾಯಪಡಿಸಿದನು.

ಹೀಗೆ ತಪ್ಪುಗಳ ಶೋಧನೆಗೂ ಕಾಸುಗಳ ಸುರಿಮಳೆಗೂ ಅತಿಶಯ ವಿನೋದಕ್ಕೂ ಎಡೆಯಾಯಿತು. ಮೊದಮೊದಲಲ್ಲಿ ಸಂಘದ ಸದಸ್ಯರೆಲ್ಲರೂ ಪರಸ್ಪರ ಪತ್ತೇದಾರರಾದರು. ನಿರೀಕ್ಷಿಸದಿದ್ದ ಸ್ಥಳಗಳಲ್ಲಿ ಅನುಕೂಲವಲ್ಲದಿದ್ದ ಸಂದರ್ಭಗಳಲ್ಲಿ ಕೂಡ, ತಪ್ಪನ್ನು ಹಿಡಿಯುವುದಕ್ಕೆ ಕೈಪುಸ್ತಕ ಸೀಸದ ಕಡ್ಡಿಗಳೊಡನೆ ಯಾರಾದರೊಬ್ಬರು

ಕಾದೇ ಇರುತ್ತಿದ್ದರು. ಒಂದು ಸಂಜೆ ಸದಸ್ಯರೊಬ್ಬರು ಕೆಲವು ಮಂದಿ ಇಷ್ಟ ಶಿಷ್ಯರೊಡಗೂಡಿ ಕಾಲೇಜಿನ ಹತ್ತಿರದ ಕೆರೆಯಲ್ಲಿ ನೌಕಾವಿಹಾರ ಮಾಡುತ್ತಿದ್ದರು. ಮನೋಹರವಾದ ಪರಿಸರಣ,ಕೆರೆಯ ಶೀತಲ ಜಲದಲ್ಲಿ ಲಯಬದ್ಧವಾದ ಸಂಚಲನ, ಶಿಷ್ಯರೊಂದಿಗೆ ಹಾಸ್ಯ ರಂಜಿತವಾದ ಸಲ್ಲಾಪ - ಇದರಲ್ಲಿ ಗುರುಗಳು ಮಗ್ನರಾಗಿದ್ದಾರೆ. ಆಗ ಇದ್ದಕ್ಕಿದ್ದ ಹಾಗೆ ಕೆರೆಯ ಏರಿಯಿಂದ ''ಬಿತ್ತು ಮೂರು ಕಾಸು; ಹುಷಾರ್'' ಎಂಬ ಕೂಗು ಸಂಜೆಯ ಶಾಂತಿಯನ್ನು ಸೀಳಿಕೊಂಡು ಬಂದು ಕೆರೆಯ ನಡುವೆ ದೋಣಿಯಲ್ಲಿದ್ದ ಇವರ ಕಿವಿಯನ್ನು ಶೂಲದಂತೆ ಇರಿಯಿತು. ಬೆಚ್ಚಿ ನೋಡುತ್ತಾರೆ. ಏರಿಯ ಮೇಲೆ ಸಹಸದಸ್ಯರೊಬ್ಬರು ಗಾಳಿಯ ಸವಾರಿಗೆ ಹೊರಟಿದ್ದಾರೆ! ಕೆರೆಯ ನಡುವೆ ಅರೆಮರವಿನಲ್ಲಿ ತಾನು ಆಡುತ್ತಿದ್ದ ಮಾತನ್ನು ಈತನು ಹೊಂಚಿ ಕೇಳಿ ಹೀಗೆ ತಪ್ಪು ಹುಡುಕಿ ಉದ್ಘೋಷಿಸಬಹುದೆ? ಶಿಷ್ಯರ ಮುಂದೆ ತನ್ನ ಮಾನವನ್ನು ಕಳೆಯಬಹುದೆ? ಉಲ್ಲಾಸವನ್ನೆಲ್ಲಾ ಉಡುಗಿಸಬಹುದೆ? ಇದಕ್ಕೆ ಸಮಯ ಸಾಧಿಸಿ ಪ್ರತೀಕಾರ ಮಾಡಿದ ಹೊರತು ಮನಸ್ಸು ಹದಕ್ಕೆ ಬರುತ್ತದೆಯೆ? ಇಂಥ ಪ್ರಸಂಗಗಳು ಎಷ್ಟೊಂದು ನಡೆದವೊ! ಕಡೆಗೆ ನಿದ್ದೆಮಾಡುವಾಗ ಕೂಡ ಕಾಸಿನ ತಪ್ಪನ್ನು ಕನವರಿಸಿಕೊಂಡು ಚೀರಿ ಮಡದಿ ಮಕ್ಕಳನ್ನು ಬೆಚ್ಚಿಸಿದವರು ಎಷ್ಟೋ ಮಂದಿ. ಸಂಘದ ಪ್ರಭಾವ ಸದಸ್ಯರ ಜೀವನವನ್ನು ಆದ್ಯಂತವಾಗಿ ವ್ಯಾಪಿಸಿತು. ಎಲ್ಲರೂ ''ಶಾಲಾ ನಿಘಂಟಿ''ನ ಹಾಳೆಗಳನ್ನು ಮುಗುಚತೊಡಗಿದರು. (ಆಗಿನ್ನೂ ಮೈಸುರು ವಿಶ್ವ ವಿದ್ಯಾನಿಲಯದ ಇಂಗ್ಲಿಷ್ - ಕನ್ನಡ ನಿಘಂಟಿನ ಕೆಲಸ ಮೊದಲಾಗಿರಲಿಲ್ಲ) ''ಇದಕ್ಕೆ ಸಮಾನ ಪದ ಯಾವುದು? ಈ ಅಭಿಪ್ರಾಯವನ್ನು ಕನ್ನಡದಲ್ಲಿ ಹೇಗೆ ಹೇಳುವುದು?'' - ಯಾರ ಬಾಯಲ್ಲೂ ಈ ಬಗೆಯ ಪ್ರಶ್ನೆಗಳೇ. ಕನ್ನಡ ಭಾಗ್ಯಚಕ್ರ ಮೇಲಕ್ಕೆ ಏರಿತೆಂದೇ ಅನೇಕರು ನಂಬಿದರು.

ಕೆಲವು ದಿನ ಕಳೆಯಿತು. ಕಾಸಿನ ಲೆಕ್ಕ ರೂಪಾಯಿಗಳ ಮಟ್ಟಕ್ಕೆ ಹತ್ತಿತು. ಕೆಲವರಂತೂ ಒಂದು ತಿಂಗಳಲ್ಲಿ ಕಾಫಿ ತಿಂಡಿಗಾಗಿ ವೆಚ್ಚ ಮಾಡುತ್ತಿದ್ದುದಕ್ಕಿಂತ ಹೆಚ್ಚು ಹಣವನ್ನು ತಪ್ಪು ಕಾಣಿಕೆಯಾಗಿ ಸಂಘಕ್ಕೆ ಸಲ್ಲಿಸಬೇಕಾಯಿತು. ಇದನ್ನು ನೋಡಿ ಸದಸ್ಯರ ಹೃದಯದಲ್ಲಿ ಕ್ರಮ ಕ್ರಮವಾಗಿ ಭೀತಿ ಸಂಚಾರವಾಯಿತು. ವಾಕ್ಪಟುಗಳಾಗಿದ್ದ ಹಲವರ ನಾಲಗೆ ಬಿಗಿಯಿತು. ನಿರ್ಭಯವಾಗಿ ನಿರರ್ಗಳವಾಗಿ ಹರಟೆ ಹೊಡೆಯುತ್ತಿದ್ದ ಕಾಲ ಮಾಯವಾಯಿತು. ಅರ್ಥಕ್ಕಿಂತ ಶಬ್ದಕ್ಕೆ ಪುರಸ್ಕಾರ ಹೆಚ್ಚಿತು; ಎರಡಕ್ಕಿಂತಲೂ ಮೌನವೇ ಮೇಲೆಂಬ ಪರಮಾರ್ಥ ಹಲವರಿಗೆ ಗೋಚರಿಸಿತು. ''ಮೂಕಂ ಕರೋತಿ ವಾಚಾಲಂ'' ಎಂಬ ಪಂಕ್ತಿ ಇಲ್ಲಿಗೆ ವಿಪರೀತಾರ್ಥದಲ್ಲಿ ಅನ್ವಯಿಸಿತು. ಅದುವರೆಗೂ ನಾಮಕರಣವನ್ನೇ ಕಾಣದಿದ್ದ ಸಂಘಕ್ಕೆ ಈಗ 'ಕಾಸಿನ ಸಂಘ'ವೆಂಬ ಅಪಖ್ಯಾತಿ ಅಂಟಿಕೊಂಡಿತು.

ಹಣ ತೆರುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ, ಹಿಂದೆ ಊಹೆಗೂ ಮೀರಿದ್ದ ಕೆಲವು ಪದ್ಧತಿಗಳು ಕಾಣಿಸಿಕೊಂಡುವು. ''ನಾವು ಕನ್ನಡವನ್ನು ಆಡುವುದಕ್ಕೆ ಹೊರಟರೆ ತಾನೆ ಜುಲ್ಮಾನೆ ಬೀಳುವುದು. ಇನ್ನು ಮುಂದೆ ಏನಾದರೂ ಚಿಂತೆಯಿಲ್ಲ. ಇಂಗ್ಲಿಷನ್ನೇ ಉದ್ದಕ್ಕೂ

ಆಡುತ್ತಾ ಇದ್ದು ಬಿಡೋಣ'' ಎಂದು ಕೆಲವರು ದೃಢಪ್ರತಿಜ್ಞೆ ಮಾಡಿ ಅದನ್ನೇ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದರು. ಅದುವರೆಗೆ ಅವರ ಬಾಯಿಂದ ಒಮ್ಮೊಮ್ಮೆ ಹೊರಡುತ್ತಿದ್ದ ಕನ್ನಡ ಪದಗಳು ಈಗ ಅಗೋಚರವಾದವು. ಬೇಕೆಂದು ಕನ್ನಡದಲ್ಲಿ ಪ್ರಶ್ನೆ ಹಾಕಿದರೂ ಅವರು ಎಚ್ಚರ ತಪ್ಪದೆ ಇಂಗ್ಲಿಷಿನಲ್ಲೇ ಉತ್ತರ ಕೊಡುತ್ತಿದ್ದರು. ಇನ್ನು ಕೆಲವರು ಬೇರೊಂದು ಯುಕ್ತಿಯನ್ನು ಹುಡುಕಿದರು. ''ಕನ್ನಡಕ್ಕೆ ಇಂಗ್ಲಿಷನ್ನು ಬೆರಸಿದರೆ ದೋಷ; ತಮಿಳಿನಲ್ಲೋ ಹಿಂದೂಸ್ಥಾನಿಯಲ್ಲೋ ಮಾತಾಡುತ್ತಾ ಅದರ ತುಂಬ ಇಂಗ್ಲಿಷನ್ನು ಗಿಡಿದರೂ ನಮ್ಮ ಕೈತಡೆಯುವವರು ಯಾರು?'' ಎಂದು ತಮಿಳು ಹಿಂದೂಸ್ಥಾನಿಗಳ ಕೊಲೆಗೆ ತೊಡಗಿದರು. ಇವರ ವಾಗ್ಧಾರೆಯನ್ನು ನೋಡಿದವರಿಗೆ - ಕನ್ನಡದ ಮಾತಿರಲಿ, ಈ ಜೊತೆಯ ಭಾಷೆಗಳ ರಕ್ಷಣೆಗಾಗಿ ಒಂದು ಸಂಘವನ್ನು ಮೊದಲು ಸ್ಥಾಪಿಸಬೇಕು ಎನ್ನಿಸುತ್ತಿತ್ತು.

ಈ ಎರಡು ಗುಂಪಿನ ಸದಸ್ಯರು ಹೀಗೆ ಚಾಪೆಯ ಕೆಳಗೆ ತೂರಿದರೆ. ಬೇರೆ ಕೆಲವರು ರಂಗೋಲಿಯ ಕೆಳಗೆ ತೂರುವ ಚಳಕವನ್ನು ತೋರಿಸಿದರು. ''ಈಗ game ಅಂತಾರಲ್ಲ ಅದನ್ನು Start ಅನ್ನೋ ಪದಾರ್ಥ ಮಾಡೋಣ'', ''ಇವತ್ತು weather ಅನ್ನೋ ಪದಾರ್ಥ Warm ಅಂತಾರಲ್ಲ ಅದಾಗಿದೆ'', ''ನನ್ನ ಮಾತನ್ನು ಬಕಗ್ರೀವದಲ್ಲಿ personal ಅನ್ನೋ ಹಾಗೆ ತಗೋಬೇಡಿ, Objective ಅಂತಾರಲ್ಲ ಹಾಗೆ consider ಮಾಡಿ - consider ಬಕಗ್ರೀವದಲ್ಲಿ'' - ಈ ಸೌಷ್ಠವದ ವಾಕ್ಯ ಪರಂಪರೆ ಅವರ ಬಾಯಲ್ಲಿ ಒಂದೇ ಸಮನಾಗಿ ಹೊರಡತೊಡಗಿತು. ''ಬಕಗ್ರೀವದಲ್ಲಿ'' ಎನ್ನುವುದು "In inverted commas" ಎಂಬುದಕ್ಕೆ ಕನ್ನಡ! ನಮ್ಮಲ್ಲಿ ಹಿಂದಿನಿಂದಲೂ ಇರುವ ''ಹಂಸಪಾದ'' ಎಂಬುದರ ಮಾದರಿಯ ಮೇಲೆ, ಈ ''ಬಕಗ್ರೀವ''ವನ್ನು ಅನುವಾದ ಚಿಹ್ನೆ ಎಂಬ ಅರ್ಥದಲ್ಲಿ ಪ್ರತಿಭಾಶಾಲಿಗಳೊಬ್ಬರು ಸಂಘದಲ್ಲಿ ಬಳಕೆಗೆ ತಂದಿದ್ದರು. ''ಬಕಗ್ರೀವದಲ್ಲಿ'' ಎಂಬ ಮಂತ್ರಾಕ್ಷರಗಳನ್ನು ಒಂದು ಇಂಗ್ಲಿಷ್ ಪದದ ಹಿಂದೆಯೋ ಮುಂದೆಯೋ ಉಚ್ಚರಿಸಿ ಬಿಟ್ಟರೆ ತೀರಿತು, ಯಾವ ಮೈಲಿಗೆಯ ದೋಷವೂ ಅಂಟುತ್ತಿರಲಿಲ್ಲ! - ಹಿಂದೆ ಹೇಳಿದ ಎರಡು ವರ್ಗದವರೇನೋ ಸಂಘದ ನಿಯಮಗಳಿಗೆ ಅಂಜಿ ಆತ್ಮ ಸಂರಕ್ಷಣೆಯ ಉಪಾಯಗಳನ್ನು ಹುಡುಕಿಕೊಂಡರೆನ್ನಬಹುದು. ಈ ಕೊನೆಯ ವರ್ಗದ ಮಹನೀಯರಾದರೆ ''ಅನುವಾದ ವಿಧಿ''ಯ ವಿಡಂಬನಾಸ್ತ್ರವನ್ನು ಪ್ರಯೋಗಿಸಿ, ಸಂಘವನ್ನು ಹಾಸ್ಯದ ಗಾಳಿಯಲ್ಲಿ ತೂರಿ ಬಿಡುವಂತೆ ತೋರಿತು. ಅವರನ್ನು ತಡೆಗಟ್ಟುವ ಯಾವ ಪ್ರತ್ಯಸ್ತ್ರಗಳೂ ವಿಧಾಯಕನ ಬತ್ತಳಿಕೆಯಲ್ಲಿ ಇರಲಿಲ್ಲ.

ಈ ನಡುವೆ ವಿಧಾಯಕನಿಗೆ ಕೆಲವು ವಿಲಕ್ಷಣವಾದ ಅನುಭವಗಳು ಒದಗತೊಡಗಿದವು. ನಾನು ಎದುರಿಗಿದ್ದಾಗ ಮಾತ್ರ ಸದಸ್ಯರೆಲ್ಲರೂ ಬೇಕಾದಷ್ಟು ತಪ್ಪು ಮಾಡುತ್ತಿದ್ದಂತೆಯೂ ಅವರವರೇ ಸಂಧಿಸಿದಾಗ ಹರಟೆಯಲ್ಲಿ ಎಷ್ಟು ಕಾಲ ಕಳೆದರೂ ಅವರ ಬಾಯಿಂದ ಬೆರಕೆಮಾತೇ ಹೊರಡದಿದ್ದಂತೆಯೂ ಸದಸ್ಯರ ಲೆಕ್ಕದ ಪುಸ್ತಕಗಳ ಪರಿಶೀಲನೆಯಿಂದ ಈತನಿಗೆ ಭಾಸವಾಯಿತು. ಇದರ ಜೊತೆಗೆ ಉಪಾಧ್ಯಾಯರ

ಕೊಠಡಿಯಲ್ಲಿ ಈತನಿಲ್ಲದಿರುವಾಗ ಯಥೇಚ್ಛವಾಗಿ ಗದ್ದಲವಾಗುತ್ತಿದ್ದರೂ, ದೂರದಲ್ಲಿ ಈತನ ಮುಖ ಕಾಣುತ್ತಿದ್ದ ಹಾಗೆಯೇ ಗುಸುಗುಸು ಮಾತು ಅರ್ಧ ನಿಮಿಷ ನಡೆದು, ಈತನು ಕೊಠಡಿಗೆ ಕಾಲಿಡುವುದಕ್ಕೂ ಅಲ್ಲಿ ನಿಶ್ಯಬ್ದತೆ ತುಂಬಿಕೊಳ್ಳುವುದಕ್ಕೂ ಸರಿಹೋಗುತ್ತಿತ್ತು; ಕೊಠಡಿಯಿಂದ ಹೊರಡುತ್ತಲೇ ಮತ್ತೆ ಮಾತಿನ ಹೊಳೆ ಹರಿಯುತ್ತಿತ್ತು. ಇದೆಲ್ಲಕ್ಕಿಂತ ಹೆಚ್ಚಾಗಿ ಆತನನ್ನು ಕಲವಳಪಡಿಸಿದ ಸಂಗತಿಯೇನೆಂದರೆ, ಹಿಂದೆ ಆಪ್ತಮಿತ್ರರಾಗಿದ್ದವರು ಕೂಡ ಈಗ ದೂರದಲ್ಲಿ ಕಂಡರೆ ಕಾಣದವರಂತೆ ಹಾಗೆಯೇ ಸರಿದುಬಿಡುತ್ತಿದ್ದರು. ಒಂದೊಂದು ವೇಳೆ ಸಮೀಪಿಸಲೇಬೇಕಾದಾಗ ಎರಡು ನಿಮಿಷಗಳು ತುಟಿಪಿಟಕ್ಕೆನ್ನದೆ ಸುಮ್ಮನಿದ್ದು, ಬೇರೆ ಯಾವುದೋ ಕೆಲಸವನ್ನು ಜ್ಞಾಪಿಸಿಕೊಂಡವರಂತೆ ಹೊರಡುತ್ತಿದ್ದರು. ಅಂತೂ ತುಂಬಿದ ವಿಶ್ವದಲ್ಲಿ ತಾನು ಮಾತ್ರ ಏಕೋ ಒಂಟಿಯಾದಂತೆ ವಿಧಾಯಕನಿಗೆ ಅರಿವಾಯಿತು.

ಇದೆಲ್ಲದರ ಅರ್ಥ ಕೊನೆಕೊನೆಗೆ ಆತನ ಉತ್ಸಾಹದ ತಿಮಿರವನ್ನು ಭೇದಿಸಿಕೊಂಡು ಬಂದು ಒಳಗಣ್ಣಿಗೆ ಹೊಳೆಯಿತು; ಕನ್ನಡ ಉದ್ಧಾರಕ್ಕಾಗಿ ಹೊರಟಿದ್ದವರು ''ಕಾಸಿನ ಲೆಕ್ಕ''ದ ಮಹಿಮೆಯಿಂದ ಈ ಕನ್ನಡವನ್ನೇ ಹಗೆಯಾಗಿ ಕಾಣುವ ಸ್ಥಿತಿಗೆ ಇಳಿದಿದ್ದರು. ಕನ್ನಡ ಮಾತಿನಲ್ಲಿ ಇಂಗ್ಲಿಷಿಗೆ ಬಹಿಷ್ಕಾರ ಹಾಕಲು ಕಂಕಣ ಕಟ್ಟಿದ್ದವರು ಈಗ ತಮ್ಮ ವಿಧಾಯಕನಿಗೇ ಬಹಿಷ್ಕಾರ ಹಾಕಿದ್ದರು.



ಇನ್ಸ್‌ಪೆಕ್ಟರ್ ಗದ್ದಾ

(ಕೆ.ವಿ. ಐಯ್ಯರ್ ಅವರ ''ಸಮುದ್ಯತಾ'' ಸಂಕಲನದಿಂದ)

ನಾಲ್ಕನೆಯ ಕಂತು

ಸಂತೆಯ ದಿನ ಬೇಗನೆ ಎದ್ದು ಸ್ನಾನ ಮಾಡಿ ಒಳ್ಳೆ ಬಟ್ಟೆಗಳನ್ನುಟ್ಟು, ಚೆನ್ನಾಗಿರುವ ಕುದುರೆಯ ಗಾಡಿಯೊಂದನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು, ಸಂತೆಗೆ ಹೊರಟೆ. ದೊಡ್ಡಯ್ಯ ಹೇಳಿದಂತೆಯೇ ಕಾಟಯ್ಯ ತನ್ನ ದೊಡ್ಡ ಜವಳಿ ಅಂಗಡಿಯನ್ನು ತಂದಿದ್ದ. ಕಾಟಯ್ಯ ನಮ್ಮ ಅಮೃತಾರಿಷ್ಟದ ಏಜೆಂಟ್.

ನಾನು: 'ಕಾಟಯ್ಯ, ನಾನು ಮನಸ್ಸು ಮಾಡಿಕೊಂಡಿರೋ ಹೆಣ್ಣು ಈ ದಿನ ಸಂತೆಗೆ ಬರುತ್ತಾಳೆ. ಪರಿಚಯವಿದೆ. ಅವಳ ಸ್ನೇಹ ಕುದುರಿಸಿಕೊಳ್ಳಬೇಕೆಂದೇ ನಾನು ಬಂದಿದ್ದೇನೆ. ನಿನ್ನ ಸಹಾಯ ನನಗೆ ಈಗ ಬೇಕು' ಎಂದೆ.

ಕಾಟಯ್ಯ: 'ಮಲ್ಲಣ್ಣ, ನೀನು ಮದ್ವೆ ಮಾಡ್ಕೊಂತೀಯ ಅಂತ ತಿಳಿದ್ರೆ ಸಾಕು. ನೂರು ಜನ ಬರ್ತಾರೆ, ನಿನ್ನ ಮನೆತಾವ್ಕೇ - ಹೆಣ್ಣು ಕೊಡ್ತೀವೀಂತ. ಒಳ್ಳೇದು, ನೀನೇ ಮನಸ್ಸು ಮಾಡ್ಬಿಟ್ಟರೊ ಹೆಣ್ಣು ಪರಮಾಷೀನೇ ಇರ್ಬೇಕು. ಬರ್‍ಲಿ, ನಾನೂ ಒಂದು ಸಲ ನೋಡ್ಬಿಡ್ತೀನಿ. ನನ್ನ ಸಾಯ ನೀನು ಕೇಳ್ಬೇಕಾ! ಸಂತೆಗೆ ಓಗೋರೆಲ್ಲ ನನ್ನಂಗ್ಡಿ ಮುಂದೆ ತಾನೇ ಆಸಿ ಓಗ್ಬೇಕು. ಇಲ್ಲೇ ಕುಂತುಕೊ - ಬಿಸಲು ಬಲು ಜೋರೈತೆ. ಈವತ್ತು ಮಳೆ ಬಂದ್ರೇನೂ ಬಂತೆ ಮದ್ಯಾಣ್ಣಕ್ಕೆ' ಎಂದ ಕಾಟಯ್ಯ.

ಅರ್ಧ ಗಂಟೆ ಕೂಡ ಕಾಯಲಿಲ್ಲ. ದೊಡ್ಡಯ್ಯನ ಭವಿಷ್ಯ ಸುಳ್ಳಾಗಲಿಲ್ಲ. ಉಷಾ ನಮ್ಮ ಅಂಗಡಿಯ ಮುಂದೆಯೇ ನಿಂತು, ಅಂಗಡಿಯ ನೆತ್ತಿಗೆ ತಗಲಿಸಿದ್ದ ಬೋರ್ಡನ್ನು ಓದಿದಳು. ಉಷೆಯ ಜೊತೆಯಲ್ಲಿ ಮೈಗಾವಲಿಗಾಗಿ ಪ್ಯಾದೆಯೊಬ್ಬ ಬಂದಿದ್ದ.

ಉಷೆ ಅಂಗಡಿಯೊಳಕ್ಕೆ ಕಾಲಿಟ್ಟಳು. ನಾನು ಥಟ್ಟನೆ ಎದ್ದು ನಿಂತು, ನಗುಮುಖದಿಂದ ಸಂತೋಷಸೂಚಕ ಧ್ವನಿಯಲ್ಲಿ 'ಬರಬೇಕು - ಬರಬೇಕು' ಎಂದು ಸ್ವಾಗತಿಸಿ, ಪಕ್ಕದಲ್ಲಿ ಕುಳಿತಿದ್ದ ಕಾಟಯ್ಯನಿಗೆ 'ಸಾವ್‌ಕಾರ್‍ರೇ, ನಮ್ಮೂರಿನ ಇನ್ಸ್‌ಪೆಕ್ಟರ್ ಮಾದಪ್ಪನವರ ಕೊಮಾರ್‍ತಿ, ಉಷಾದೇವಿಯವರು' ಎಂದೆ. ಕಾಟಯ್ಯ ಎದ್ದು ನಿಂತು 'ದಯಮಾಡಿಸಬೇಕು, ತಾಯಿ. ಒಳಕ್ಕೆ ಬನ್ನಿ... ಅಲ್ಲಿ ಬಿಸಿಲು ಜಾಸ್ತಿ... ಹೀಗೆ ಬನ್ನಿ' ಎಂದು ಉಷೆಯನ್ನು ಸ್ವಾಗತಿಸುತ್ತಿರುವಾಗಲೆ, ಅಂಗಡಿಯ ಆಳು ಯಜಮಾನನ ಇಂಗಿತವನ್ನರಿತು ಆಕೆಗೆ ಒಂದು ಸುಖಾಸನವನ್ನು ತಂದು ಇಟ್ಟ. ಉಷೆ ಕುಳಿತಳು. ನನ್ನನ್ನು ನೋಡಿ 'ಇದೇನು ಮಲ್ಲೇಗೌಡರೆ, ತಾವೂ ಸಂತೆಗೆ!' ಎಂದು ಕೇಳಿದಳು. 'ಏಕೆ! ಬರಬಾರದೇನು? ಇದು ನನ್ನ ಸ್ನೇಹಿತರ ಅಂಗಡಿ. ವರ್ಷಕ್ಕೆ ಒಮ್ಮೆ ಊರ ಹಬ್ಬದ ದಿನ ತಮ್ಮ ಅಂಗಡಿಯನ್ನು ತರುತ್ತಾರೆ. ಬಲು ದೊಡ್ಡ ಮನುಷ್ಯರು. ದೊಡ್ಡ ವ್ಯಾಪಾರಿಗಳು. ಇವರಲ್ಲಿಲ್ಲದ ಜವಳಿ ನಮ್ಮ ದೇಶದಲ್ಲಿ ಇನ್ನೆಲ್ಲಿಯೂ ಇಲ್ಲ. ಅಮೇರಿಕ, ಯೂರೋಪುಗಳಿಂದ ಸರಕು ತರಿಸುತ್ತಾರೆ. ಪರ್ಮಿಟ್ ಇವರೊಬ್ಬರಿಗೆ ಮಾತ್ರವೇ ಇರುತ್ತದೆ' ಎಂದೆ.

ಕಾಟಯ್ಯ ಮಾತನ್ನು ಮುಂದುವರಿಸಿ, 'ಕಂಚಿ, ಧರ್ಮಾವರ, ಆರಣಿ, ಕೊಯಮತ್ತೂರು, ಹಾಲ್ಯದ ಸರಕುಗಳು ಬೇಕಾದಷ್ಟು ರಖಂ ಬಂದಿವೆ. ನೋಡಬೇಕು' ಎನ್ನುತ್ತಿರುವಾಗಲೆ, ಆಳುಗಳು ಪಿಂಡಿಗಳನ್ನು ಬಿಚ್ಚಿ ಸೀರೆಗಳನ್ನು ಒಂದೊಂದಾಗಿ ಉಷೆಯ ಮುಂದೆ ರಾಶಿ ಹಾಕಿದರು. 'ಸ್ವಲ್ಪ ಮಾಡರನ್ ಸರಕನ್ನೂ ತೋರಿಸಿರಿ, ಸಾವ್‌ಕಾರ್ರೆ' ಎಂದೆ ನಾನು.

'ಲ್ರೋ... ನೈಲಾನ್, ಟೆರ್ರಿಲಿನ್, ಡ್ರೈಲಾನ್, ಆರ್ಲಾನ್ - ಸರಕುಗಳು ಮೊನ್ನೆ ಬಂತಲ್ಲ ಸಿಂಗಪೂರಿಂದ ಅವುಗಳನ್ನು ತನ್ನಿ' ಎಂದ ಕಾಟಯ್ಯ. ಅವೂ ಒಂದೊಂದಾಗಿ ಉಷೆಯ ಮುಂದೆ ಬಂದಿಳಿಯಲಾರಂಭಿಸಿದುವು. ಉಷೆ ಎಲ್ಲವನ್ನೂ ನಿಧಾನವಾಗಿ ಪರೀಕ್ಷಿಸಿ, ಕೊನೆಗೆ ಫ್ಲೆಮಿಂಗೊರೆಡ್ ಬಣ್ಣದ ಒಂದು ಟೆರ್ರಿಲಿನ್ ಸೀರೆಯನ್ನು ಮೆಚ್ಚಿ, 'ಇದರ ಬೆಲೆ ಎಷ್ಟು?' ಎಂದು ಕೇಳಿದಳು.

'ಅದು ಇಂಪೋರ್ಟೆಡ್ ಮಾಲು, ನಮಗೆ ಇರುವುದು ಬಹಳ ಸ್ವಲ್ಪ ಕೋಟ. ತೆಗೊಳ್ಳಿ ತಾಯಿ. ಭೇಷ್ ಆಯ್ಕೆ ಮಾಡಿದೀರ' ಎಂದ ಕಾಟಯ್ಯ.

ಉಷೆ ಎದ್ದು ನಿಂತು, ಸೀರೆಯ ಒಂದು ಭಾಗವನ್ನು ಲಘು ನೆರಿಗೆ ಹಿಡಿದು, ಅದನ್ನು ತಾನುಟ್ಟಿದ್ದ ಸೀರೆಯ ಹೊಟ್ಟೆಯ ಭಾಗದೊಳಗೆ ಸಿಲುಕಿಸಿ, ಬಿಟ್ಟಿದ್ದ ಸೀರೆಯ ಭಾಗವನ್ನು ಸುತ್ತಿ ಸೆರಗು ಹೊದೆದುಕೊಂಡು, ಎದುರಿಗೆ ಕಟ್ಟಿದ್ದ ನಿಲುವು ಕನ್ನಡಿಯಲ್ಲಿ ತಾನೇ ನೋಡಿಕೊಂಡು, 'ಒಪ್ಪುತ್ತೆ' ಎಂಬ ಮುಖ ಭಾವದಿಂದ, ನಮ್ಮ ಕಡೆಗೆ ಒಮ್ಮೆ ತಿರುಗಿ, ನಮ್ಮ ಅಭಿಪ್ರಾಯವನ್ನೂ ಕೋರಿದವಳಂತೆ ಅರೆಕ್ಷಣ ನಿಂತಳು.

ನಾವಿಬ್ಬರೂ ಒಂದೇ ಧ್ವನಿಯಲ್ಲಿ 'ಬಲು ಚೆನ್ನಾಗಿ ಒಪ್ಪುತ್ತೆ' ಎಂದೇಬಿಟ್ಟೆವು. ಬೆಲೆಯ ಮಾತು ಬೇಕೆಂತಲೇ ಸ್ವಲ್ಪ ತಕರಾರಿನಲ್ಲಿ ಬಿತ್ತು. ನೂರಿಪ್ಪತ್ತೈದು ರೂಪಾಯಿನ ಮೌಲ್ಯದ ಆ ಸೀರೆಯನ್ನು ಕಾಟಯ್ಯ ನನ್ನ ಬಲವಂತದ ಮೇಲೆ ನೂರೇ ರೂಪಾಯಿಗಳಿಗೆ ಕೊಟ್ಟುಬಿಟ್ಟ. (ಮಿಕ್ಕ ರೂಪಾಯಿಗಳನ್ನು ನಾನು ಅನಂತರ ಕಾಟಯ್ಯನಿಗೆ ಕೊಟ್ಟೆ) ಉಷೆಗೆ ಬಲು ತೃಪ್ತಿ ಸಂತೋಷಗಳಾದುವು. ನನಗೂ ಅಷ್ಟೇ ಆಯಿತು.

ಉಷೆಯ ಜೊತೆಯಲ್ಲಿ ಬಂದಿದ್ದ ಪ್ಯಾದೆಯ ಪರಿಚಯವನ್ನೂ ನಾನು ಆಗಲೇ ಮೆಲ್ಲಮೆಲ್ಲನೆ ಮಾಡಿಕೊಂಡೆ. ಇಬ್ಬರನ್ನೂ ಸಂತೆಯ ಒಳಕ್ಕೆ ನಾನೇ ಕರೆದುಕೊಂಡು ಹೋಗಿ, ಬೇಕಾದ ಕಾಯಿ, ಪಲ್ಲೆ, ಹಣ್ಣು ಇತರ ಸಾಮಾನುಗಳನ್ನೂ ಆದಷ್ಟು ಅಗ್ಗದಲ್ಲೆ ಕೊಡಿಸಿಕೊಟ್ಟು 'ಸಂತೆಯ ವ್ಯಾಪಾರದ ತೆರನೇ ಬೇರೆ, ಇಲ್ಲಿ ಪಟ್ಟಣಿಗರೂ ಧೋಕಾ ತಿನ್ನುತ್ತಾರೆ.... ನಿಮಗೆ ಚೌಕಸಿ ಮಾಡುವುದಕ್ಕೆ ಇಷ್ಟವಿರುವುದಿಲ್ಲ... ಒಂದಕ್ಕೆ ಎರಡರಷ್ಟೇ ಬೆಲೆ ಹೇಳುವುದು ಅವರ ವಾಡಿಕೆ... ಹೋಗಲಿ, ಬೇಕಾದುದನ್ನೆಲ್ಲ ಕೊಂಡು ಆಯಿತಲ್ಲ... ಮನೆಗೆ ಇನ್ನೇನಾದರೂ ಬೇಕೇ?' ಎಂದು ಪ್ರಶ್ನಿಸಿದೆ.

ಉಷೆ ನನ್ನ ಮಾತುಗಳನ್ನು ಕೇಳಿ, ಪ್ಯಾದೆಯ ಕಡೆ ತಿರುಗಿ ನೋಡಿದಳು. ಪ್ಯಾದೆ ಅರ್ಥ ಮಾಡಿಕೊಂಡ. ಅವನು ಮೆಲ್ಲನೆ ನನ್ನ ಬಳಿಗೆ ಬಂದು ''ಸಾವ್‌ಕಾರ್ರೇ, ಸಂತೇಲಿ ಒಳ್ಳೆ ಕೋಳಿಗಳು ಸಿಗ್ತಾವಾ?'' ಎಂದು ಕೇಳಿದ.

'ಎಂಥಾದ್ದು ಬೇಕಪ್ಪ? ಮೊಟ್ಟೆಗಾಗಿ ಸಾಕೋ ಕೋಳೀನಾ? ಊಟಕ್ಕೆ ಬೇಕಾಗೋ ಕೋಳೀನಾ?' ಎಂದು ಕೇಳಿದೆ ನಾನು. ಆ ಮಾತಿಗೆ ಉಷೆ ನಕ್ಕಳು.

ಪ್ಯಾದೆ ನನ್ನನ್ನು ಎರಡು ಹೆಜ್ಜೆ ದೂರ ಕರೆದುಕೊಂಡು ಹೋಗಿ, 'ಈವತ್ತು ಇನ್ಸ್‌ಪೆಕ್ಟ್ರು ಊರಲ್ಲಿಲ್ಲ. ಯಾವ್ದೋ ಕೇಸ್ ಮೇಲೆ ಹೋಗಿದ್ದಾರೆ, ರಾತ್ರೀಗೇ ಮನೆಗ್ಬರೋದು, ರಾತ್ರಿ ಊಟಕ್ಕೆ. ಯಜಮಾನ್ರಿಗೆ ಕೋಳಿ ತುಂಬ ಇಷ್ಟವಂತೆ. ಅದಕ್ಕೇ ಚಿಕ್ಕಮ್ಮಾವ್ರು ಅವರ ಊಟಕ್ಕೆ ರಾತ್ರೀಗೆ ಕೋಳಿ ಮಾಡ್ಬೇಕಂತೆ. ಅವರು ಸಂತೆಗೆ ಬಂದಿದ್ದೇ ಕೋಳಿ ಕೊಂಡ್ಕೊಳ್ಳಾಕೆ' ಎಂದ.

ಆಗ ನಾನು 'ಈ ದಿನ ದೈವವೇ ನನ್ನ ಒತ್ತಾಸೆಗೆ ನಿಂತಿದೆ. ನಾನೀಗ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳದಿದ್ದರೆ, ವ್ಯರ್ಥವೇ ಸರಿ' ಎಂದುಕೊಂಡೆ. ಆಗ ನನ್ನ ಮಿದುಳು ಮಿಂಚಿನೋಪಾದಿಯಲ್ಲಿ ಕೆಲಸ ಮಾಡಲಾರಂಭಿಸಿತು.

ಆ ದಿನ ಸಾಯಂಕಾಲದೊಳಗೆ ನಾನು ಇನ್ನೊಮ್ಮೆ ಉಷೆಯನ್ನು ಕಂಡು ಹೆಚ್ಚು ಪರಿಚಯ ಮಾಡಿಕೊಳ್ಳುವ ಅವಕಾಶವನ್ನು ದೊರಕಿಸಿಕೊಳ್ಳಲೋಸುಗ ಆ ಪ್ಯಾದೆಗೆ ಹೇಳಿದೆ: 'ಒಳ್ಳೇ ಟೇಬಲ್ ಬರ್ಡ್ಸ್ ಸಂತೆಗೆ ಬರೋದಿಲ್ಲ. ನಮ್ಮೂರಿನಲ್ಲೆ ಒಬ್ಬರ ಹತ್ತಿರವಿದೆ. ಸಂಜೆಗೆ ನಿಮ್ಮ ಮನೆಗೆ ಒಂದನ್ನು ನಾನೇ ತಂದು ಕೊಡುತ್ತೇನೆ.'

ಪ್ಯಾದೆಗೆ ಸಂತೋಷವಾಯಿತು. ಅದನ್ನು ಅವನು ಉಷೆಗೆ ಹೇಳಿದ. ಉಷೆಗೂ ಸಂತೋಷವಾಯ್ತು. 'ಇಂದು ತಮ್ಮಿಂದ ಬಹಳ ಉಪಕಾರಗಳಾಗುತ್ತಿವೆ' ಎಂದು ತುಂಬು ಸಂತೋಷಸೂಚಕ ಧ್ವನಿಯಲ್ಲಿ ಹೇಳಿದಳು. 'ಇನ್ನು ಬರುತ್ತೇವೆ' ಎನ್ನುತ್ತ ಪ್ಯಾದೆಯೊಡನೆ ಹೊರಟಳು...

ನಾನು: 'ತಡೆಯಿರಿ. ನೀವು ಇಲ್ಲಿಗೆ ಬರುವಾಗ ಹೇಗೆ ಬಂದಿರಿ?' ಎಂದು ಕೇಳಿದೆ.

ಉಷೆ: 'ಬೆಳಿಗ್ಗೆ ತಣ್ಣಗಿತ್ತು, ವಾಕೂ ಆಯಿತು ಎಂದು ನಡೆದೇ ಬಂದೆವು.'

ನಾನು: ಈಗ ಮತ್ತೆ ನಡೆದೇ ಹೋಗುತ್ತೀರಾ?

ಉಷೆ: ಎತ್ತಿನ ಬಂಡಿಗಳಲ್ಲಿ ಕುಳಿತು ನನಗೆ ಅಭ್ಯಾಸವೇ ಇಲ್ಲ.

ನಾನು: ಚಿಂತೆ ಬೇಡ... ನನ್ನ ಕುದುರೆ ಗಾಡಿ ಇದೆ. ಮಳೆ ಬರುವ ಸೂಚನೆಗಳೂ ಇವೆ. ಬಿಟ್ಟು ಬಾ ಎಂದು ಗಾಡಿಯವನಿಗೆ ಹೇಳುತ್ತೇನೆ.

ಉಷೆ ತಾನು ಅಂದು ಅಂಗಡಿಯಲ್ಲಿ ಕೊಂಡಿದ್ದ ಸೀರೆಯನ್ನು ತೋರಿಸುತ್ತ, 'ಇಂದು ತಮ್ಮಿಂದ ಉಪಕಾರದ ಮೇಲೆ ಉಪಕಾರ ವಾಗುತ್ತಿದೆ' ಎಂದಳು.

ನಾನು: ಓ! ಇದೆಲ್ಲ ಏನು ಮಹಾ!... ಸಂಜೆಗೆ ಬಂದು ಕಾಣುತ್ತೇನೆ.

ಅವರನ್ನು ಗಾಡಿಯಲ್ಲಿ ಕೂಡಿಸಿ ಗಾಡಿಯವನಿಗೆ 'ಬೇಗ ಬಿಟ್ಟು ಬಾ' ಎಂದೆ.

ಗಾಡಿ ಹಿಂದಿರುಗಿ ಬಂದಮೇಲೆ ನಾನೂ ಊರಿಗೆ ಹೊರಟೆ. ಹೋಗುತ್ತ ದಾರಿಯಲ್ಲಿ ಮುಂದಿನ ಹೊಂಚಿಕೆಗಳನ್ನು ಕೂಡಿಸಿಕೊಳ್ಳುತ್ತ ಹೋದೆ. ಆಗ ನನಗೆ ತಂದೆ ಹೇಳಿದ್ದ ಮಾತುಗಳು ಜ್ಞಾಪಕಕ್ಕೆ ಬಂದುವು: 'ಮಲ್ಲ... ಇನ್ನು ನೀನು ಗಂಡ್ಸು. ಶಹಬಾಸ್

ಅನ್ನಿಸ್ಕೋಬೇಕು ನಪ್ಪತ್ರ ಏನ್ ಮಾಡ್ತೀಯೋ... ಎಂಗೆ ಮಾಡ್ತೀಯೋ ಇವನ್ನೆಲ್ಲಾ ನಿಂಗೇ ಬಿಟ್ಟಿದೇವೆ - ಹುಡುಗಿಯನ್ನು ಸಂಪಾದಿಸಿಕೊ... ಆದರೆ ಒಂದು ಮಾತು ಮಾತ್ರ ಮರೀಬೇಡ... ಕುದುರೆ ಮುಖ್ಯ. ನೋಡು, ಸಂಶಯಕ್ಕೆ ಆಸ್ಪದ ಇಲ್ಲದಂಗೆ ಕುದುರೇನ ತಂದೊಪ್ಪಿಸ್ಬಿಡು' ಅಂದದ್ದು.

'ಈ ದಿನ... ಈ ಹೊತ್ತು ನಾನು ಆ ಕೆಲಸವನ್ನು ಪೂರೈಸದಿದ್ದರೆ, ಇದ್ದರೂ ಸತ್ತಂತೆಯೆ. ಹೇಗಾದರೂ ಮಾಡಿ ಉಷೆಯ ಸ್ನೇಹವನ್ನಂತೂ ಸಂಪಾದಿಸಿಕೊಳ್ಳಬೇಕು... ಕುದುರೇನೂ ಲಪಟಾಯಿಸಿಬಿಡಬೇಕು' ಎಂದು ದಾರಿಯುದ್ದಕ್ಕೂ ಯೋಚನೆ ಮಾಡುತ್ತಲೇ ಬಂದೆ. 'ಇಷ್ಟೆಲ್ಲಾ ಕುದುರಿಸಿಕೊಟ್ಟ ನನ್ನ ಭಾಗ್ಯದ ದೈವ ಇನ್ನು ಉಳಿದಿರುವ ಭಾಗಕ್ಕೂ ನನ್ನ ಬುದ್ಧಿಯನ್ನು ಕುದುರಿಸದೆ ಇದ್ದೀತೆ?' ಎಂದು ನನಗೆ ನಾನೇ ಧೈರ್ಯ ತಂದುಕೊಳ್ಳುತ್ತ, ಊರಿಗೆ ಬಂದು ಸೇರಿ, ಊಟ ಮಾಡಿ, ಒಂದು ಸಣ್ಣ ನಿದ್ದೆಯನ್ನೂ ಮಾಡಿದೆ.

ನಾನು ನಿದ್ದೆ ಮಾಡುತ್ತಿದ್ದಾಗ ಒಳ್ಳೇ ಮಳೆ ಬಂದಿತ್ತು. ಸಂಜೆ ಹೊತ್ತಿಗೆ ಒಳ್ಳೆಯ ಬಟ್ಟೆಗಳಿಂದ ಅಲಂಕರಿಸಿಕೊಂಡು ಹೋಗಿ ಒಂದು ಪುಷ್ಟಿಯಾಗಿ ಬೆಳೆದಿದ್ದ ಕೋಳಿಯನ್ನು ಕೊಂಡು, ಅದನ್ನು ಕಾಲ್ಗಳಿಂದ ತೂಗುಹಾಕಿ ಹಿಡಿದುಕೊಂಡು ಊರ ಹೊರಗೆ ತಕ್ಕಷ್ಟು ನಿರ್ಜನ ಪ್ರದೇಶದಲ್ಲಿದ್ದ ಇನ್ಸ್‌ಪೆಕ್ಟರ್ ಬಂಗಲೆಗೆ ಹೋದೆ.

ಗೇಟಿನ ಬಳಿ, ಆ ದಿನ ಬೆಳಿಗ್ಗೆ ಉಷೆಯ ಮೈಗಾವಲಾಗಿ ಸಂತೆಗೆ ಬಂದಿದ್ದ ಪ್ಯಾದೆಯೆ ಸೆಂಟ್ರಿ ಡ್ಯೂಟಿಯಲ್ಲಿದ್ದ. 'ಏನಪ್ಪಾ ತಂದಿರಾ?' ಎಂದು ಕೇಳಿದ. 'ಇದೊ ನೋಡು' ಎಂದು ಹಿಡಿದಿದ್ದ ಕೋಳಿಯನ್ನು ತೋರಿಸಿದೆ. 'ನೀವೇ ಹೋಗಿ ಒಪ್ಪಿಸಿಬಿಡಿ, ಚಿಕ್ಕಮ್ಮಾವ್ರು ಬೋ ಮೆಚ್ಕೊಂತಾರೆ' ಎಂದ ಪ್ಯಾದೆ.

'ಭಲೆ, ನನ್ನ ದೇವರೆ! ನನ್ನ ಕೆಲಸವೆಲ್ಲವನ್ನೂ ನೀನೇ ಮಾಡಿಕೊಡುತ್ತಿರುವೆಯಲ್ಲಾ!' ಎಂದು ಅತಿಶಯ ಸಂತೋಷಪಟ್ಟೆ.

ಆಗ ನನ್ನ ಮುಂದಿನ ಪ್ಲಾನನ್ನು ಬಿಚ್ಚಿದೆ. ಅಲ್ಲಿ ನನ್ನ ಕೆಲಸವಾಗುವ ತನಕ ಪ್ಯಾದೆಯನ್ನು ಅಲ್ಲಿಂದ ತೊಲಗಿಸಬೇಕಾಗಿತ್ತು. ನಾನು ಅರ್ಧ ನಿಮಿಷ ಕಾಲ ಏನೋ ಬಲು ಯೋಚನೆಯಲ್ಲಿದ್ದವನಂತೆ ನಟಿಸುತ್ತಾ ನಿಂತೆ. 'ಏನು ಸ್ವಾಮಿ! ಏನು? ಬಲು ಯೋಚನೆ ಮಾಡುತ್ತಿದ್ದೀರಲ್ಲ?' ಎಂದು ಪ್ಯಾದೆ ಕೇಳಿದ.

ನಾನು: 'ಅವಸರದಲ್ಲಿ ನಾನು ಒಂದು ವಿಷಯ ಮರೆತು ಬಂದೆ ನೋಡು... ನುಗ್ಗೇಕಾಯಪ್ಪ... ನುಗ್ಗೇಕಾಯಿ ಅದಿಲ್ದಿದ್ರೆ ಕೋಳಿ ಸಾರು ಮಾಡೋದಕ್ಕೇ ಆಗೋದಿಲ್ಲ. ಒಬ್ಬಟ್ಟಿಗೆ ಹೂರಣಾನೆ ಇಲ್ಲದ ಹಾಗೆ ಆಗುತ್ತೆ... ಛೆ!ಛೆ!ಛೆ! ನಾವು ಈ ದಿನ ಸಂತೇಲೇ ಕೊಂಡ್ಕೊಂಡ್ಬರಬೇಕಾಗಿತ್ತು. ನಿನಗೂ ತೋಚಲಿಲ್ಲ... ಚಿಕ್ಕಮ್ನೋರ್ಗೂ ತೋಚ್ದೆ ಹೋಯ್ತು. ಈಗ ಜ್ಞಾಪಕಕ್ಕೆ ಬಂದೇನು ಪ್ರಯೋಜನ?... ಅಂತೂ ನಿನ್ನ ಯಜಮಾನ್ರ ಊಟಕ್ಕೆ ಕೋಳಿ ತಂದೂ ಪ್ರಯೋಜನವಿಲ್ದೆ ಹೋಯಿತಲ್ಲಾ... ಹೋಗ್ಲಿ... ಈಗೇನು ಅಷ್ಟು ಮಿಂಚಿಹೋಗಿಲ್ಲ ಹೊತ್ತು.... ಕೋಳೀಸಾರಿಗೆ ನುಗ್ಗೇಕಾಯಿ ಮಸಾಲೇನೇ ಪಸಂದು... ನೋಡು, ಒಂದು ಚಿಕ್ಕ ಕೆಲಸ - ನಿನ್ನ ಕೈಯಲ್ಲಾಗುತ್ತೆ... ಮಾಡ್ತೀಯ? ನಿನ್ನ

ಚಿಕ್ಕಮ್ನೋರ ಕೈಲೂ ಭೇಷ್ ಅನ್ನಿಸಿಕೋಬಹುದು ನೀನು.... ನೀನು ಬರೋವರ್ಗು ನಾನು ಇಲ್ಲೆ ನಿಂತಿರುತ್ತೇನೆ... ಅಗೋ, ಅಲ್ಲಿ ಕಾಣುತ್ತಲ್ಲ ಕಾಲುವೆ ದಂಡೇಲಿ ತೆಂಗಿನ ಮರಗಳ ತೋಪು... ಅದೇ, ಹಟ್ಟಿ ಸೀನಪ್ಪನ ತೋಟ. ಮಲ್ಲೇಗೌಡರಿಗೆ ಈಗ್ಲೇ ಬೇಕಂತೆ ಅಂತ ಹೇಳಿ, ನಾಲ್ಕಾರು ಸುಗ್ಗೇಕಾಯಿಗಳನ್ನ ಗಿಡದಿಂದ ಕಿತ್ಕೊಡಿ ಅಂತ ಕೇಳು. ನನಗೇಂದ್ರೆ ಇಲ್ಲಾ ಅನ್ನೋದಿಲ್ಲ ಸೀನಪ್ಪ... ಒಂದು ವೇಳೆ ಅವನ ತೋಟದ ಗಿಡ್ದಲ್ಲಿ ಆಗಿಹೋಗಿದ್ರೆ, ಅಲ್ಲಿಂದ ಮುಂದಕ್ಕೆ ಹತ್ತು ಹೆಜ್ಜೆ ಕೂಡ ಇಲ್ಲ ಯಂಗಟಿಗಾನ ತೋಟ. ಅಲ್ಲಿ ಧಂಡಿಯಾಗಿವೆ ಸುಗ್ಗೇಕಾಯಿ ಗಿಡಗಳು. ಇಗೋ ಈ ಐವತ್ತು ಪೈಸೆ ಬಿಸಾಕು ಅವನಿಗೆ - ನನಗೇಂತಾಲೂ ಹೇಳು. ಸುಗ್ಗೆಕಾಯಿ ಕಿತ್ಕೊಡ್ತಾನೆ. ಆರೆಂಟು ಕಾಯಿಗಳನ್ನ ಜಾಗ್ರತೆ ತೆಗೆದುಕೊಂಡು, ಬಂದುಬಿಡು, ನನ್ನ ರಾಜ. ಈವತ್ತು ನಿನ್ನ ಯಜಮಾನ್ರ ಊಟ ನಿನ್ನಿಂದ ಫಸಂದ್ ಆಗಿಬಿಡಲಿ' ಎಂದು ಹೇಳಿ ಅವನನ್ನು ಚೆನ್ನಾಗಿ ಪುಸಲಾಯಿಸಿ ಕಳಿಸಿದೆ. ಆ ಗಮಾರ 'ತರ್ತೇನೆ' ಅಂತ ಹೇಳಿ ಹೊರಟೇಬಿಟ್ಟ.

ವರದಪ್ಪ, ನಿನಗೆ ಹೇಳಬೇಕೆ ನಾನು! ಅದು ಸುಗ್ಗೇಕಾಯಿ ಕಾಲವಲ್ಲ, ಕೋಳೀ ಸಾರಿಗೆ ಸುಗ್ಗೇಕಾಯಿ ಅಗತ್ಯವೂ ಇಲ್ಲ, ಅಂಬೋದನ್ನ? ಆ ಹೊತ್ತು ನನ್ನ ಚುರುಕುಬುದ್ಧಿಗೆ ನಾನೇ ಮಚ್ಚಿಕೊಂಡ. ಎಲ್ಲ ದೈವಸಹಾಯ ವರದಪ್ಪ, ಅದೊಂದು ಇಲ್ದಿದ್ರೆ ಏನೇನೂ ಸಾಗೋದಿಲ್ಲ, ಆ ಪ್ಯಾದೆ ಕಣ್ಣಿಗೆ ದೂರವಾಗಿ ಹೋಗುವವರೆಗೂ ನಿಂತಲ್ಲೇ ನಿಂತಿದ್ದು, ಅನಂತರ ಬಂಗಲೆಯೊಳಕ್ಕೆ ಹೋಗಿ, ಮುಚ್ಚಿದ್ದ ಮನೆಯ ಮುಂಬಾಗಲನ್ನು ತಟ್ಟಿದೆ.

'ಯಾರೂ?' ಎಂದು ಕೇಳಿಬಂತು.

'ನಾನು ಮಲ್ಲೇಗೌಡ' ಎಂದು ಕೇಳಿಸಿದೆ.

ಉಷೆ ಸಂಭ್ರಮದಿಂದ ಬಂದು ಬಾಗಿಲು ತೆರೆದು ಹಸನ್ಮುಖಿಯಾಗಿ 'ಒಳಕ್ಕೆ ಬನ್ನಿ, ಇಷ್ಟು ಹೊತ್ತಾಯಿತಲ್ಲ! ತಾವು ಬರುತ್ತೀರೋ ಇಲ್ಲವೋ ಎಂತ ಶಂಕೆ ಪಡುತ್ತಿದ್ದೆ. ನಮ್ಮ ಮನೆ ಅಡಿಗೇವಳು 'ನೆಗಡಿ ತಲೆನೋವು ಎಂದು ಮಲಗಿಬಿಟ್ಟಿದ್ದಾಳೆ... ನಾನೇ ಅಡುಗೆ ಮಾಡಬೇಕಾಗಿದೆ. ಮಸಾಲೆ ಎಲ್ಲವನ್ನೂ ಅರೆದಿಟ್ಟೂ ಬಿಟ್ಟಿದ್ದೇನೆ. ಕಾಯುತ್ತ ಕುಳಿತಿದ್ದೆ' ಎಂದಳು.

ನಾನು 'ಇಗೊ ತೆಗೆದುಕೊಳ್ಳಿ, ಒಳ್ಳೆಯದೆ ಸಿಕ್ಕಿತು' ಎನ್ನುತ್ತ ಕೋಳಿಯನ್ನು ಉಷೆಯ ಕೈಗೆ ಕೊಡುತ್ತಿರುವಾಗ ಆಕೆಯ ಕೈಯನ್ನು ಮುಟ್ಟುವ ಆತುರದಲ್ಲಿ ಕೋಳಿಯನ್ನು ಜಾರಿಬಿಟ್ಟೆ.

ವರದಪ್ಪ, ಹೇಳಬೇಕೇನು ನಿನಗೆ? ಬೇಕೆಂತಲೇ ಕೋಳಿಯ ಕಾಲನ್ನು ನಾನು ಕಟ್ಟಿರಲಿಲ್ಲ. ಬಿಡುಗಡೆಯಾದುದಕ್ಕೆ ಆ ಕೋಳಿ ಬದುಕಿಕೊಂಡೆ ಎನ್ನುವ ರೀತಿಯಲ್ಲಿ ರೆಕ್ಕೆಗಳನ್ನು ಬಡಿಯುತ್ತ ಕ್ಕೊ...ಕ್ಕೊ...ಕ್ಕೋ ಎನ್ನುತ್ತ, ನಮ್ಮಿಬ್ಬರ ಕೈಗೂ ಸಿಕ್ಕದೆ, ಮನೆಯ ಮೂಲೆ ಮೂಲೆಗೂ ಓಡಾಡಿತು. ಅದನ್ನು ಅಟ್ಟಿಸಿಕೊಂಡು ಹೋಗಿ ಹಿಡಿಯುವ ನೆವದಲ್ಲಿ ಗೋಡೆಯ ಗೂಟಕ್ಕೆ ತೂಗಿಬಿದ್ದಿದ್ದ ಲಾಯದ ಬೀಗದ ಕೈಯನ್ನು ಸದ್ದಿಲ್ಲದೆ ವಶಪಡಿಸಿಕೊಂಡೆ. ಇನ್ನೂ ಕೋಳಿ ಹಿಡಿಯುವವನಂತೆಯೇ ನಟಿಸುತ್ತ ಅದನ್ನು ಮನೆಯ ಬಾಗಿಲಿನಿಂದ ಹೊರಕ್ಕೆ ಓಡುವಂತೆ ನಾನೇ ಮಾಡಿದೆ. 'ಎಲಾ ಎಲಾ! ತಪ್ಪಿಸಿಕೊಂಡು

ಬಿಟ್ಟಿತಲ್ಲಾ! ಹೇಗಾದರೂ ಹಿಡಿದೇ ತರುತ್ತೇನೆ... ನೀವು ಇಲ್ಲೇ ಇರಿ' ಎಂದು ಉಷೆಗೆ ಹೇಳಿ, ಕೋಳಿಯನ್ನು ಹಿಡಿಯುವವನಂತೆ, ಅದನ್ನು ಕುದುರೆ ಲಾಯವಿದ್ದ ಕಡೆಗೇ ಅಟ್ಟಿಸಿಕೊಂಡು ಓಡಿದೆ. ಸಧ್ಯ, ಉಷೆ ನಾನು ಹೇಳಿದಂತೆ ಮನೆಯ ಒಳಗಡೆಯೇ ನಿಂತಳು. ಆ ಸಮಯ ನನಗೆ ಬಹು ಅನುಕೂಲವಾಗಿಯೂ ಆಯಿತು. ಲಾಯದ ಬೀಗವನ್ನು ತೆರೆದು, ಹಾಗೆಯೇ ಬಿಟ್ಟು ಅರೆಕ್ಷಣದಲ್ಲಿ ಕೋಳಿಯನ್ನು ಅಟ್ಟಿ ಹಿಡಿದು ಮನೆಯೊಳಕ್ಕೆ ಹೋಗಿ ಉಷೆಯ ಕೈಗೆ ಕೊಡುತ್ತ 'ನೀವು ಈ ಸಲ ಅದನ್ನು ಚೆನ್ನಾಗಿ ಹಿಡಿದುಕೊಂಡ ಮೇಲೆಯೇ ಕೈ ಬಿಡುತ್ತೇನೆ' ಎಂದು ಹೇಳಿ, ಇನ್ನೊಂದು ಬಾರಿ ಉಷೆಯ ಕೈಸೋಕಿನಿಂದ ಪುಳಕಿತನಾದೆ. ಉಷೆ ಕೋಳಿಯನ್ನು ಒಳಕ್ಕೆ ತೆಗೆದುಕೊಂಡು ಹೋಗಿ, ಎರಡು ನಿಮಿಷಗಳ ನಂತರ ಬಂದಳು. ಆ ಬಿಡುವಿನಲ್ಲಿ ನಾನು ಬೀಗದ ಕೈಯನ್ನು ಸ್ವಸ್ಥಾನದಲ್ಲಿ ಪ್ರತಿಷ್ಠಿಸಿಬಿಟ್ಟೆ. ಅದುವರೆಗೆ ಅಲ್ಲಿಯೇ ನಿಂತಿದ್ದ ನನ್ನನ್ನು ನೋಡಿ ಉಷೆ ಪುನಃ ನನಗೆ ತನ್ನ ಮಂದಹಾಸದ ಸುಖವನ್ನಿತ್ತು 'ಗೌಡರೆ, ತಂದೆಗಳು ಬಂದು ಊಟ ಮಾಡುವಾಗ್ಗೆ ತಮ್ಮ ಇಂದಿನ ಉಪಕಾರವನ್ನು ರುಚಿಸುವಂತೆ ಅವರಿಗೆ ಹೇಳುತ್ತೇನೆ. ನಮಸ್ಕಾರ... ಶ್ರಮವಾಯಿತು, ಕ್ಷಮಿಸಬೇಕು' ಎಂದು ಹೇಳಿದಳು. ನಾನು ಹೊರಟೆ. ಉಷೆ ಬಾಗಿಲನ್ನು ಹಾಕಿಕೊಂಡಳು.

ನಾಲ್ಕು ಐದು ನಿಮಿಷಗಳಲ್ಲಿ ಇಷ್ಟೆಲ್ಲಾ ಆಗಿಹೋಯಿತು. ಗಾರ್ಡ್ ಪ್ಯಾದೆ ಇನ್ನೂ ಯಂಗಟಿಗಾನ ತೋಟದಿಂದ ಹಿಂತಿರುಗಿರಲಿಲ್ಲ. ಅನುಕೂಲವೇ ಆಯಿತು. ದೇವರೇ ನನ್ನ ಇಂದಿನ ಕೆಲಸಗಳೊಂದೊಂದೂ ನನಗೆ ಅನುಕೂಲಿಸುವಂತೆ ಮಾಡಿಕೊಡುತ್ತಿದ್ದ. ಲಾಯದ ಬಾಗಿಲನ್ನು ತೆರೆದು, ತಂದಿದ್ದ ಟಾರ್ಚ್ ಬೆಳಕನ್ನು ಒಳಕ್ಕೆ ಪಸರಿಸಿ ನೋಡಿದೆ. ಕುದುರೆ ಎದ್ದು ನಿಂತು ಹುಲ್ಲನ್ನು ಮುಕ್ಕುತ್ತಿತ್ತು. ನಾನು ಬೀಗ ತೆಗೆದು, ಬಾಗಿಲನ್ನು ಸ್ವಲ್ಪ ತೆಗೆದಿಟ್ಟಾಗಲೆ ಆ ಸದ್ದಿಗೆ ಅದು ಎದ್ದು ನಿಂತಿರಬೇಕು. ನಾನು ಮೆಲ್ಲನೆ ಒಳಕ್ಕೆ ಹೋಗಿ, ಅಂಗಯ್ಯಲ್ಲಿ ಎರಡು ಸಣ್ಣ ಸಕ್ಕರೆ ಅಚ್ಚುಗಳನ್ನು ತೋರಿಸುತ್ತ ಅದರ ಮುಸುಡಿಯ ಹತ್ತಿರಕ್ಕೆ ಕೈನೀಡಿ, 'ಟಿಸ್... ಟಿಸ್... ಟಿಸ್...' ಎಂದೆ. ಅದು ಒಮ್ಮೆ ಮೂಸಿ, ಆ ಎರಡು ಸಕ್ಕರೆ ಅಚ್ಚುಗಳನ್ನೂ ಒಂದೇ ಬಾಯಿಗೆ ಕಬಳಿಸಿತು. ಇನ್ನೆರಡು ಸಕ್ಕರೆ ಅಚ್ಚುಗಳನ್ನು ಕೊಟ್ಟೆ. ಅದನ್ನೂ ಒಂದೇ ಬಾಯಿಗೆ ಕಬಳಿಸಿತು. ಲಗಾಮನ್ನು ಕಟ್ಟಿದ್ದ ಗೂಟದಿಂದ ಬಿಚ್ಚಿಕೊಂಡೆ. ನನ್ನ ಎದೆ ಡವಡವನೆ ಬಡಿದುಕೊಳ್ಳುತ್ತಿತ್ತು. ಸಕ್ಕರೆಯನ್ನು ತಿಂದ ಸಂತೋಷಕ್ಕೆ 'ಸಾಲದು, ಇನ್ನೂ ಕೊಡು' ಎಂಬ ಅರ್ಥದ ಮೇಲೋ ಈ ಉಚ್ಚೈಶ್ರವಸ್ಸು ಒಂದು ಬಾರಿ ಕೆನೆದಿದ್ದರೆ ಸಾಕು, ನನ್ನ ಅದುವರೆಗಿನ ಕಾರ್ಯವೆಲ್ಲ ನಿರರ್ಥಕವಾಗುತ್ತಿತ್ತು. ಕುದುರೆಗೆ ಸಕ್ಕರೆ ರುಚಿ ಹತ್ತಿತ್ತು. ಎಡಗೈಯ ಅಂಗಯ್ಯಲ್ಲಿ ಮೂರು ನಾಲ್ಕು ಸಕ್ಕರೆ ಅಚ್ಚುಗಳನ್ನಿಟ್ಟುಕೊಂಡು ಆಶೆ ತೋರಿಸುತ್ತ, ಬಲಗೈಯಿಂದ ಲಗಾಮನ್ನು ಹಿಡಿದು ಮೆಲ್ಲಗೆ ಎಳೆಯುತ್ತ - ಆ ಕತ್ತೆಯನ್ನು ಬಂಗಲೆಯ ಆವರಣದಿಂದ ಹೊರಕ್ಕೆ ತಂದು ಸ್ವಲ್ಪ ದೂರ ರಸ್ತೆಯಲ್ಲಿ ನಡೆಯಿಸಿಕೊಂಡು ಹೋಗಿ, ಅಲ್ಲಿಂದ ಮುಂದೆ ಕವಲೊಡೆದ ಕಾಲು ರಸ್ತೆಗೆ ತಿರುಗಿಸಿಕೊಂಡು, ಆ ಪ್ರಾಣಿಗೆ ಇನ್ನೆರಡು ಸಕ್ಕರೆ ಅಚ್ಚುಗಳನ್ನು ತಿನ್ನಿಸಿ, ಬೇಗ ಬೇಗನೆ ಯಕ್ಷರ ಕೋಟೆಯ ಕಡೆಗೆ ನಡೆಯಿಸಿಕೊಂಡು ಹೋದೆ.

ಆಗಾಗ್ಗೆ ಒಂದೆರಡು ಸಕ್ಕರೆ ಚೂರುಗಳನ್ನು ಕೊಡುತ್ತ ಯಕ್ಷರ ಕೋಟೆಯನ್ನು ಸೇರಿ, ಗವಾಕ್ಷದ ಬಳಿ ಆ ಅಶ್ವಶ್ರೇಷ್ಠವನ್ನು ನಿಲ್ಲಿಸಿಕೊಂಡು, ಗವಾಕ್ಷವನ್ನು ಜಗ್ಗಿ ಎಬ್ಬಿಸಿ, ಒಳಕ್ಕೆ ಕೇಳಿ ಬರುವಂತೆ 'ಕುದುರೇನ ತಂದಿದ್ದೇನೆ' ಅಂತ ಕೂಗಿ ಹೇಳಿದೆ.

ನನ್ನ ತಂದೆಯವರು ಏಣಿಯನ್ನು ಹತ್ತಿ ಹೊರಕ್ಕೆ ತಲೆ ಹಾಕಿ, 'ಮಲ್ಲ, ಯಾರಿಗೂ ಏನೂ ಗುಮಾನಿ ಬರದ ಹಾಗೆ ಕೆಲಸ ಮಾಡಿದ್ದೀ ತಾನೆ?'' ಎಂದು ಕೇಳಿದರು.

'ನನ್ನ ಕೈಲಾದ ಮಟ್ಟಿಗೂ' ಎಂದುತ್ತರ ಕೊಟ್ಟೆ.

ಚಿಕ್ಕಪ್ಪ ತಂದೆಗಳ ಹಿಂದೆಯೇ ಏಣಿಯನ್ನು ಹತ್ತಿ ನಿಂತಿದ್ದವರು ''ನಾಳೆ ಇಷ್ಟು ಹೊತ್ತಿನತನಕ ಕುದುರೇನ ಹುಡುಕುತ್ತ ಗುಮಾನಿ ಮೇಲೆ ಯಾರೂ ಬರದೇ ಇದ್ರೆ, ನೀನು ಬುದ್ಧಿಶಾಲಿತನದಿಂದ ಕೆಲಸ ಮಾಡಿದ್ದೀಯೆಂದು ನಾನು ನಿನ್ನನ್ನು ಶಹಬಾಸ್ ಎನ್ನುತ್ತೇನೆ. ನೀನು ಕುದುರೆ ತರ್ತಿಯಾಂತ ದೊಡ್ಡಯ್ಯ ಇಷ್ಟು ಹೊತ್ತೂ ನಿನಗಾಗಿ ಇಲ್ಲೇ ಕಾದು ಕುಳಿತಿದ್ದ. ಈಗ್ತಾನೇ ಅವನು ಕಾಡಿನ ದಾರೀಲಿ ಊರಿಗೆ ಹೋದ. ನೀನು ಒಂದ್ವೇಳೆ ಆ ದಾರೀಲೇ ಬಂದಿದ್ರೆ ಕುದುರೇನ ಹಾಗೇ ತೆಗೆದುಕೊಳ್ಳುತ್ತೇನೆಂತ ಹೇಳಿಹೋದ. ಈಗ ನಾಳೆವರ್ಗೂ ಕುದುರೇನ ಗವೀಲೇ ಕಟ್ಟಿಕ್ಕೋಬೇಕು. ಬಾಳ ತಕರಾರ್ ಕೆಲ್ಸ. ಕಾಡಿನ ದಾರಿಯಿಂದ ಅದನ್ನು ಇಲ್ಲಿಗೆ ತಾ. ಒಳಕ್ಕೆ ಬರೋಕೆ ಎಷ್ಟು ತಕರಾರ್ ಮಾಡ್ತದೊ? ಬಂದ್ಮೇಲೆ ಎಷ್ಟು ತೊಂದ್ರೆ ಕೊಡ್ತದೊ?.... ಇನ್ನು ಅದಕ್ಕೆ ಉಲ್ಲು? ಉಳ್ಳಿ? ಈ ರಾತ್ರೀನೇ ಇನ್ಸ್‌ಪೆಕ್ಟರು ಸಿಬ್ಬಂದಿಯೊಡನೆ ಪಂಜುಗಳನ್ನು ಹತ್ತಿಸಿಕೊಂಡು ಇಲ್ಲಿಯವರ್ಗೂ ಉಡುಕ್ತ ಇದರ ಹೆಸರು ಹಿಡಿದು ಕೂಗಿದಾಗ... ಈ ಕತ್ತೆ ''ಇಗೋ ಇಲ್ಲಿದ್ದೇನೆ'' ಅಂತ ಕೆನೆದರೆ, ಏನಪ್ಪಾ ಗತಿ? ಒಳ್ಳೆ ಅಗಚಾಟ್ಲಿಗೆ ಸಿಕ್ಕಿಬಿದ್ದೆವಲ್ಲಾ! ಆ ಹಾಳು ದೊಡ್ಡಯ್ಯನಿಗೆ ಹೇಳ್ದೆ: ಇನ್ನೂ ಸ್ವಲ್ಪ ಹೊತ್ತು ಇರು ಅಂತ. ಅವನೇಕೆ ಕೇಳ್ತಾನೆ ನನ್ನ ಮಾತ? ಮಲ್ಲ, ನೀನ್ಯಾಕೆ ಬಂದೆ ಈ ದಾರೀಲಿ... ಈ ದೆಯ್ಯಾನ ಕರ್ಕೊಂಡು? ಅಷ್ಟೂ ತಿಳೀಲಿಲ್ವಾ ನಿನ್ಗೆ? ಈಗ ಹೆಂಗಪ್ಪಾ ತರ್ತೀಯ ಇದನ್ನ ಒಳೀಕೆ? - ಹೂಂ... ಇಗೊ, ಈ ಲಾಟೀನ್ ತಗೊ, ಮೆಲ್ಲಗೆ ಕಾಡು ಆದೀಗೆ ಎಳ್ಕೊಂಡ್ಹೋಗಿ - ಇನ್ನಷ್ಟು ಸಕ್ರೆ ತಿನ್ನಿಸಿ, ಕರ್ಕೊಂಡ್ಬಾ ಗವಿ ಒಳಕ್ಕೆ. ಇನ್ನಾ ನಾಳೆ ರಾತ್ರಿಯಾಗೋಗಂಟ ಇಲ್ಲೇ ಬಿದ್ದಿರ್ಬೇಕು ಇದು. ಯಾಕೋ ಕೆಲಸ ಸುಸೂತ್ರ ನಡೀತಿಲ್ಲ'' ಅಂತ ಗೊಣಗುಟ್ಟಿದ.

ನಾನು ಆ 'ಗದಾ'ವನ್ನು ಗವಿಯೊಳಕ್ಕೆ ಬಲು ಶ್ರಮದಿಂದ ನಡಸಿಕೊಂಡು ಹೋದೆ. ಜಾತ್ಯಶ್ವವಾಗಿದ್ದರೆ, ಅದೇಕೆ ಗವಿಯೊಳಕ್ಕೆ ಬರುತ್ತಿತ್ತು? ಅರ್ಧ ಕಿಲೋ ಸಕ್ಕರೆ ಅಚ್ಚುಗಳನ್ನು ಅದುವರೆಗೆ ಮುಗಿಸಿತ್ತು ಅದು. ಅದನ್ನು ತಂದೆಗಳು ಗವಾಕ್ಷದ ಏಣಿಯ ಕೆಳಗೆ, ನಮ್ಮ ಸ್ಟಿಲ್‌ಗೆ ಸಮೀಪದಲ್ಲಿ ಕಟ್ಟಿ ಹಾಕಿದರು.

ನಾನು ವಾಪಸು ಊರಿಗೆ ಬಂದು, ಮನೆ ಸೇರಿ ಮಲಗಿದೆ. ನಿದ್ದೆ ಬರಲಿಲ್ಲ. ಅಷ್ಟು ವೇಳೆಯಲ್ಲಿ ದೊಡ್ಡಯ್ಯನ ಮನೆಗೆ ಹೋಗಿ ಅವನನ್ನು ಎಬ್ಬಿಸಿ, ಸಂಗತಿ ತಿಳಿಸುವುದು ಸಾಧ್ಯವಿರಲಿಲ್ಲ. ಅವನು ಆ ವೇಳೆಗಳಲ್ಲಿ ಅಮೃತಾರಿಷ್ಟದ ಪೂರ್ಣ ಅಮಲಿನಲ್ಲಿರುತ್ತಿದ್ದ.

(ಮುಂದುವರಿಯುವುದು)

ಬಾಯಿ ಬಿಡಿಸೋದು

– ಗೌತಮ

ಸಾಕ್ಷಾತ್ ದೇವರೇ ಎದುರಿಗೆ ಬಂದು ನಿಂತರೂ ಅಷ್ಟು ಖುಷಿ ಆಗುತ್ತೋ ಇಲ್ಲವೋ, ತಟ್ಟಿದ ಬಾಗಿಲನ್ನು ತೆಗೆದಾಗ ಎದುರಿಗೆ ನಿಂತ ಚೇಲನನ್ನು ಕಂಡು ಅದಕ್ಕಿಂತಲೂ ಹೆಚ್ಚಿನ ಖುಷಿ ಆಯಿತು. ಯಾಕೆ ಅಂತ ಕೇಳ್ತೀರೋ? ಕೇಳಿ ಕೇಳಿ. ಅದನ್ನ ಹೇಳೋಕೇ ಬಂದೆ.

ನಮ್ಮ ಮನೇಲಿ ಒಂದು ಹಲಸಿನ ಮರ ಇದೆ. ನಮ್ಮ ತಾತ ನೆಟ್ಟದ್ದಂತೆ. ಕೆಂದು ಹಲಸು. ಒಂದೊಂದು ತೊಳೆ ಮೂಸಂಬಿ ಗಾತ್ರ. ನಾಲಕ್ಕು ತೊಳೆ ತಿಂದರೆ ಸಾಕು, ಒಂದು ಫುಲ್ ಮೀಲ್ ತಿಂದ ಹಾಗೆ. ಹಣ್ಣಂತೂ ಸಕ್ಕರೆ ಮೂಟೆ ಸೈಜು. ಇನ್ನು ರುಚಿ? ತೊಳೆ ಬಿಡಿಸ್ತಾ ಇದ್ರೇನೇ ಬಾಯಲ್ಲಿ ನೀರೂರುತ್ತೆ. ಒಂದೇ ಒಂದು ವಿಚಿತ್ರ ಅಂದರೆ ವರ್ಷಕ್ಕೆಲ್ಲಾ ಮರದಲ್ಲಿ ಬಿಡೋದು ಎಣಿಸಿದ ಹಾಗೆ, ಐದೇ ಐದು ಹಣ್ಣು. ನೆರೆಹೊರೆಯವರು, ನೆಂಟರಿಷ್ಟರು, ಬಂಧುಗಳು, ದೂರದ ಬಳಗದವರು ನಮಗೆ ಯಾವಾಗಲೂ ನೆಂಟರೇ. ನಮ್ಮ ಜೊತೆ ಜಗಳ ಆಡೋಕೆ ಯಾರೂ ಇಷ್ಟಪಡೋಲ್ಲ. ಮತ್ತು ಆಗಾಗ ನಮ್ಮ ಮನೇಗೆ ಇವರುಗಳಲ್ಲಿ ಯಾರಾದರೂ ಒಬ್ಬರೋ ಇಬ್ಬರೋ ಭೇಟಿ ಕೊಡ್ತಾನೇ ಇರ್ತಾರೆ. ನಮ್ಮ ಹಲಸಿಗೆ ಅಡ್ವಾನ್ಸ್ ಬುಕಿಂಗ್ ಆಗ್ತಾನೇ ಇರತ್ತೆ. ನಮ್ಮ ಪ್ರತಿಷ್ಠೆಯನ್ನು ಉಳಿಸಿಕೊಳ್ಳೋಕೆ ನಾವೂ ಬಹಳ ಮೆಟಿಕ್ಯುಲಸ್ ಆಗಿ ಹಣ್ಣುಗಳನ್ನ ವಿಲೇವಾರಿ ಮಾಡ್ತೀವಿ. ಅದಕ್ಕೆ ಅಂತಲೇ ಒಂದು ರಿಜಿಸ್ಟರ್ ಕೂಡ ಇಟ್ಟಿದ್ದೀವಿ. ರಿಜರ್ವ್ ಮಾಡೋರ ಹೆಸರನ್ನ ಕ್ರಮವಾಗಿ ಬರಕೋತೀವಿ... ಸ್ಸಾರಿ, ಈ ಪುರಾಣ ಎಲ್ಲ ಹೇಳಿ ನಿಮ್ಮ ತಲೆ ಯಾಕೆ ತಿನ್ನಲಿ? ಮುಖ್ಯ ವಿಷಯಕ್ಕೆ ಬರ್ತೀನಿ. ಆರು ತಿಂಗಳ ಹಿಂದೆ, ಇನ್ನೇನು ಕೈಗೆ ಬರಬೇಕು ಅನ್ನೋ ಹಾಗೆ ಬೆಳೆದಿದ್ದ ಹಣ್ಣು ಕಳ್ಳತನ ಆಗಿಹೋಯಿತು. ಈ ಹಲಸಿನ ಮರದ ಇತಿಹಾಸದಲ್ಲೇ ಇಂಥ ಕಳ್ಳತನ ಆಗಿರಲಿಲ್ಲ. ನನಗೂ ದಿಗ್ಭ್ರಮೆ ಆಗಿ ಹೋಯಿತು. ಏನು ಮಾಡಬೇಕು ಅಂತ ತೋಚಲಿಲ್ಲ. ತಲೆ ಮೇಲೆ ಕೈ ಹೊತ್ತು ಕುಳಿತೆವು. ಕಳ್ಳನನ್ನ ಪತ್ತೆ ಹಚ್ಚೋಕೆ ಏನೇನೋ ಪ್ರಯತ್ನ ಪಟ್ಟೆವು. ಎಲ್ಲ ವ್ಯರ್ಥವಾಯ್ತು. ಎಲ್ಲ ನಮ್ಮ ಹಣೆ ಬರಹ ಅಂತ ಸುಮ್ಮನಾದೆವು. ಎರಡನೇ ಹಣ್ಣಿಗೆ ಹಲವಾರು ಪ್ರಿಕಾಷನರೀ ಮೆಷರ್‌ಗಳನ್ನ ತೆಗೆದುಕೊಂಡೆವು. ಚೆನ್ನಾಗಿ ಬೆಳೀತು. ಸಕ್ಕರೆ ಮೂಟೆ ಸೈಜಿಗೂ ಬಂತು. ಇನ್ನು ಜಾಸ್ತಿ ದಿನ ಬಿಟ್ಟರೆ ಕಳ್ಳತನ ಆಗೋದು ಗ್ಯಾರಂಟಿ ಅಂತ ತಿಳಿದು ಮುಂದಿನ ಶನಿವಾರ ರಾತ್ರಿ ಕಿತ್ತುಬಿಡೋಣ ಅಂತ ನಿರ್ಧರಿಸಿದೆವು. ಆದರೆ ಶುಕ್ರವಾರ ಬೆಳಿಗ್ಗೆ ಎದ್ದು ನೋಡಿದರೇ? ಹಣ್ಣು ಮರದಲ್ಲಿ ಇಲ್ಲಾ! ದೇವರೇ ಏನು ಬಂತಪ್ಪ ಕೇಡುಕಾಲ ಅಂತ ಕಂಗಾಲಾದೆವು. ನೆಂಟರಿಷ್ಟರುಗಳಿಗೆ ವಿಷಯ ತಿಳೀತು. ತಲೆಗೊಂದು ಐಡಿಯಾ, ನಾಲಿಗೇಗೆ ನಾಲಕ್ಕು ಸಲಹೆ. ತಲೆ ಚಿಟ್ಟು ಹಿಡಿದುಹೋಯಿತು. ಒಂದು ವಾರ ತಲೆ ಮರೆಸಿಕೊಂಡು ಅಜ್ಞಾತವಾಸ ಮಾಡಿದೆವು.

ಅಜ್ಞಾತವಾಸ ಮುಗಿಸಿ ಬಂದಾಗ ಇನ್ನೊಂದು ಕಾಯಿ - ಹಲಸಿನ ಕಾಯಿ ಕಣ್ಣಿಗೆ ಬಿತ್ತು. ಬಂದ ಸಾವಿರಾರು ಸಲಹೆ ಸೂಚನೆಗಳಲ್ಲಿ ಕೆಲವನ್ನು ಆಯ್ದು ಜಾರಿಗೊಳಿಸಿದೆವು.

ಕಾಯುತ್ತಾ ಕೂತೆವು - ಹಣ್ಣಿನ ಕಳ್ಳನನ್ನ ಪತ್ತೆ ಹಚ್ಚಲು. ನೋಡಿ, ಇಷ್ಟು ಹಿನ್ನೆಲೆ. ಇಂಥ ಸಮಯದಲ್ಲೇ ನಮ್ಮ ಚೇಲ ಪ್ರತ್ಯಕ್ಷ ಆದದ್ದು.

ಶ್ರೀ ಶ್ರೀ ಶ್ರೀ ಅಂತಾರಲ್ಲ ಹಾಗೆ ಚೇಲ, ವಿವಿವಿಐಪಿ ಆದ. ಪದ್ದಿ ಡಬಲ್ ಸ್ಟ್ರಾಂಗ್ ಡಬಲ್ ಸ್ಪೆಷಲ್ ಕಾಫಿ ಕೊಟ್ಟಳು. ಚೇಲ ಸಂತೃಪ್ತನಾದ ಮೇಲೆ ಅವನ ಮುಂದೆ ನಮ್ಮ ಸಮಸ್ಯೆಯನ್ನ ಮಂಡಿಸಿದೆವು. ಕಣ್ಣು ಮುಚ್ಚಿ ಕುಳಿತ - ಅವನದೇ ಆದ ಧ್ಯಾನಮುದ್ರೆಯಲ್ಲಿ. ನಮ್ಮ ಸಮಸ್ಯೆ ಪರಿಹಾರವಾಯಿತು ಅಂತ ನಿಶ್ಚಿಂತರಾದೆವು. ಎಷ್ಟೋ ಹೊತ್ತಿನ ನಂತರ ಧಿಗ್ಗನೆದ್ದ.

'ಪದ್ದಕ್ಕ, ನಿಮಗೆ ಯಾರ ಮೇಲಾರ ಅನುಮಾನಾ ಐತಾ?' ಕೇಳಿದ.

'ಇದೆ. ಎದುರು ಮನೆ ಮೀನಾಕ್ಷೀನೇ ಆ ಕೆಲಸ ಮಾಡಿರೋದು' ಅಂತ ನನ್ನ ಮುಖ ನೋಡಿದಳು, ನಾನೂ ಇದರಲ್ಲಿ ಶಾಮೀಲಾಗಿದ್ದೀನೇನೋ ಅನ್ನೋ ತರಹ.

'ಅಂದರೆ ಆಯಮ್ಮಾನೇನಾ ಕಿತ್ತಿರೋದೂ?'

'ಅವಳು ಕಿತ್ತಿರ್ತಾಳಾ. ಗಂಡನ ಕೈಲಿ ಕೀಳಿಸಿರ್ತಾಳೆ'

'ಆಯಪ್ಪ ಎಂಗೆ ಪದ್ದಕ್ಕ?'

'ಆತ ಏನೊ ಒಳ್ಳೆ ಮನುಷ್ಯಾನೇ'

'ಅಂಗಾದ್ರೆ ಕೇಳ್ಬಿಡಿ, ಏನ್ರಪ್ಪ ನೀವೇನೇಯ ಅಲಸನಣ್ಣು ಕಿತ್ತದ್ದು ಅಂತ'

'ಅಲ್ಲ ಅಂತ ಹೇಳು ಅಂತ ಆ ಮಿಟಕಲಾಡಿ ಹೇಳಿರ್ತಾಳೆ. ಆತ ಬಾಯಿ ಬಿಡ್ತಾರಾ?'

'ನಾನು ಬಾಯಿ ಬಿಡಿಸ್ತೀನಿ'

'ಹೌದಾ? ಹೇಗೆ?'

'ಪಾಲಿಗ್ರಾಪಂತ ಐತಲ್ಲ, ಅದನ್ನ ಮಾಡ್ತೀನಿ'

'ಏನು ತಮಾಷೆ ಮಾಡ್ತಿದ್ದೀಯ ಚೇಲ? ಅದನ್ನೆಲ್ಲ ನನ್ನಂಥೋರು ನಿನ್ನಂಥೋರು ಮಾಡೋಕಾಗತ್ತಾ? ಅದಕ್ಕೆಲ್ಲ ಸಲಕರಣೆಗಳು ಉಪಕರಣಗಳು ಬೇಡವಾ? ಮೇಲಾಗಿ ಅವರನ್ನ ಟೆಸ್ಟಿಗೆ ಒಪ್ಪಿಸೋದು ಹೇಗೇ? ಅವರು ತಾನೇ ಹಾಗೆಲ್ಲ ಒಪ್ತಾರಾ? ಅದೆಲ್ಲ ಸುಲಭದ ಕೆಲಸ ಅಂದುಕೊಂಡೆಯಾ?'

'ಪದ್ದಕ್ಕಾ, ನೀವಂದುಕೊಂಡಿರೊ ಅಂಗೆ ಅದೇನು ಐಟೆಕ್ ಇಸ್ಯಾನೂ ಅಲ್ಲ ಒಸಾ ಇಸ್ಯಾನೂ ಅಲ್ಲ. ಓಬೀರಾಯನ ಕಾಲದಿಂದ ಇರೋ ಅಳಸಲು ಮೆತಡ್ಡೇ. ಆ ಸಿಂಪಲ್ ಮೆತಡ್‌ಗೇನೆ ಒಸ ಎಸರು ಮಡಗವ್ರೆ, ಅಷ್ಟೇಯ' ಅಂತಂದು ನನ್ನ ಕಡೆ ತಿರುಗಿ, 'ನೋಡು, ನೀನೊಂದು ಕೆಲಸ ಮಾಡು. ಸಾಯಂಕಾಲಕ್ಕೆ ನಿಮ್ಮನೇಗೆ ಬರ್ತೀನಿ. ಅಷ್ಟೊತ್ತಿಗೆ ಆಯಪ್ಪನ್ನ ಇಲ್ಲಿಗೆ ಕರ್ಕಂಬಂದಿರು. ಆಮೇಲೆ ಎಲ್ಲ ಏಳ್ತೀನಿ' ಅಂತ ಹೊರಟೇಬಿಟ್ಟ. ಮಾರನೇ ದಿನ ಬೆಳಿಗ್ಗೆ ಏಳ್ತಿದ್ದ ಹಾಗೇ ಮೀನಾಕ್ಷಿ ಗಂಡ ದೊಡ್ಡ ಮೂಟೆ ಸಮೇತ

ನಮ್ಮನೇಗೆ ಬಂದರು. ಸೀದ ಹಾಲಿಗೆ ಹೋಗಿ ಆ ಮೂಟೇನ ಅಲ್ಲಿಟ್ಟು, ತಲೆ ತಗ್ಗಿಸಿಕೊಂಡು ಹೊರಟೇ ಹೋದರು, ಪಾಪ. ಆತ ಆ ಕಡೆ ಹೋಗ್ತಿದ್ದ ಹಾಗೇ ಥಂಗನೆ ಹಾರಿ ಬಂದು ನನ್ನ ಮುಂದೆ ನಿಂತ ಪದ್ದಿ, 'ನೋಡಿದ್ರಾ, ನಾನು ಹೇಳಿರಲಿಲ್ವಾ' ಅಂದಳು ಕಳ್ಳನನ್ನ ಪತ್ತೆ ಹಚ್ಚಿದ ಹೆಮ್ಮೆಯಿಂದ.

'ಹೌದೂ, ಇದೆಲ್ಲ ಹೇಗೆ ಸಾಧ್ಯ ಆಯ್ತೂರೀ?' ಅಚ್ಚರಿಯಿಂದ ಕೇಳಿದಳು.

'ನಮ್ಮ ಚೇಲ ನಿಜವಾಗಲೂ ಪ್ರಚಂಡ ಕಣೇ. ಆತ ನಮ್ಮ ಮನೇಗೆ ಬಂದ ಮೇಲೆ ಮೂರು ಜನವೂ ಮಾತಾಡಿಕೊಂಡು ಹೊರಗೆ ಹೋದೆವಾ? ದಾರೀಲೆ ಹೋಗ್ತಾ ಹೋಗ್ತಾ ಅವನನ್ನ ತನ್ನ ಮಾತಿನ ಮೋಡೀಲಿ ಬೀಳಿಸಿಕೊಂಡ. ಹಾಗೇ ಮಾತಾಡ್ತಾ ಮಾತಾಡ್ತಾ ಆ ಹನ್ನೆರಡನೇ ಗಲ್ಲೀಲಿರೋ 'ಪಾಲಿ ಬಾರ್' ಮುಂದೆ ನಿಂತ. 'ಒಂದು ಡೋಸ್ ಆಕಿದ್ರೆ ಎಂಗೆ?' ಅಂತ ಆತನನ್ನ ಕೇಳ್ದ. ಆತ ಉತ್ತರ ಕೊಡೋಷ್ಟರಲ್ಲಿ ಒಳಗೆ ನುಗ್ಗೇಬಿಟ್ಟ. ನನ್ನೂ ಜೊತೇಲಿ ಎಳಕೊಂಡು ಹೋದ. ಸ್ವಲ್ಪ ಸ್ವಲ್ಪಾನೇ ಕುಡಿಸ್ತಾ ಹೋದ. ಆತನಿಗೆ ಅಮಲು ಏರ್ತಾ ಇತ್ತು. ಏನೇನೋ ಬಡಬಡಾಯಿಸೋಕೆ ಷುರು ಮಾಡಿದರು. ಅದೇ ಸರಿಯಾದ ಸಮಯ ಅಂತ ಮೆಲ್ಲಗೆ ಹಲಸಿನ ಹಣ್ಣಿನ ವಿಷಯ ತೆಗೆದ. ಇದ್ದಕ್ಕಿದ್ದ ಹಾಗೇ ಆತ ಗೊಳೋ ಅಂತ ಅಳೋಕೆ ಷುರು ಮಾಡಿಬಿಟ್ಟರು. ಎರಡೂ ಕೈ ಮುಗೀತಾ 'ನಾನು ತುಂಬ ತಪ್ಪು ಕೆಲಸ ಮಾಡಿಬಿಟ್ಟೆ, ಅವಳ ಮಾತು ಕೇಳಬಾರದಿತ್ತು. ಯಾವುದೋ ಕೆಟ್ಟ ಘಳಿಗೆ, ನನ್ನನ್ನ ಕದಿಯೋ ಹಂಗೆ ಮಾಡಿಬಿಡ್ತು. ತಪ್ಪಾಯ್ತು. ನೀವೇನೂ ತಪ್ಪು ತಿಳಕೋಬೇಡಿ. ಆ ಹಲಸಿನ ಹಣ್ಣನ್ನ ನಾಳೇನೇ ವಾಪಸ್ ಮಾಡಿಬಿಡ್ತೀನಿ. ಮತ್ತ ಇನ್ನು ಯಾವತ್ತೂ ಇಂಥ ಹಲ್ಕ ಕೆಲಸ ಮಾಡಲ್ಲ' ಅಂತ ಶರಣಾಗಿಬಿಟ್ಟರು ಪದ್ದೀ. ಬಾಯಿ ಬಿಡಿಸೋದು ಇಷ್ಟೊಂದು ಸುಲಭಾನಾ ಅಂತ ನನಗೆ ಆಶ್ಚರ್ಯ ಆಗಿ ಹೋಯ್ತು ಪದ್ದೀ. ಇದು ಯಾವ ಗ್ರಾಫಯ್ಯ ಅಂತ ಕೇಳಿದ್ದಕ್ಕೆ 'ಲೋಕಲ್ಲು ಗುರೂ' ಅಂದ.

ರೈಲಿನಲ್ಲಿ ಕೇಳಿದ್ದು

ಹೋಗೋದು ಫ್ರಿಕ್ಕಟೆ
ಬರೋದು ಫ್ರಿಕ್ಕಟೆ
ಸಿಕ್ಕಿಬಿದ್ದರೆ ಊಟ –
ವಸತಿ ಎರಡು ಫ್ರಿಕ್ಕಟೆ

– ಶರಣು ಎರೇಕೊಪ್ಪ

ವಸುಮತಿ ಬೆಂಗಳೂರಿಗೆ...

– ಪರಮೇಶ್ವರ ಪುರಾಣಿಕ


ಪೂನಾ ನಗರವು ಮಹಾರಾಷ್ಟ್ರ ರಾಜ್ಯದ ಸಾಂಸ್ಕೃತಿಕ ರಾಜಧಾನಿ (ನಮ್ಮ ರಾಜ್ಯದಲ್ಲಿ ಮೈಸೂರು ಇದ್ದಂತೆ) ಎಂದೇ ಪ್ರಸಿದ್ಧವು. ಪೂನಾದ ಒಂದು ಬದಿಗೆ ಕೊತ್ರುಡವೆಂಬ ಬಡಾವಣೆಯಿದೆ, ಆ ಬಡಾವಣೆ ಈಗ ಬೆಳೆದು ಬೆಳೆದೂ ಮಹಾರಾಷ್ಟ್ರದಲ್ಲಿಯೇ ಅತಿ ದೊಡ್ಡದಾದ ಬಡಾವಣೆ ಎಂದೆನಿಸಿಕೊಂಡಿದೆ. ಕೊತ್ರುಡದ ಮೊದಲ ಮುಖ್ಯ ರಸ್ತೆಯ ಮೂರನೇ ಅಡ್ಡರಸ್ತೆಯ ಎರಡನೇ ಸಂದಿಯಲ್ಲಿಯ ನಾಲ್ಕನೇಯ ಮನೆಯೇ ಗೋಪಾಲ ಅನಂತ ಪರಾಂಜಪೆ ಅವರ ಮನೆ. ಚಿಕ್ಕ ಮನೆಯಲ್ಲಿ ಹೆಂಡತಿ ಮೂವರು ಮಕ್ಕಳೊಂದಿಗೆ ಸುಖವಾಗಿದ್ದಾರೆ. ಅವರ ಮಗಳೇ ವಸುಮತಿ. ಅಯ್ಯ ಇವರ ಬಗ್ಗೆ ಯಾಕೆ ಹೇಳುತ್ತಿದ್ದೀರಿ ಎಂದು ಕೇಳುವಿರಾ? ಕೇಳಿ ವಸುಮತಿಯ ಪರಿಚಯ ನಾವೆಲ್ಲ ಮಾಡಿಕೊಳ್ಳಲೇಬೇಕಾಗಿದೆ. ಯಾಕೆಂದರೆ ಇನ್ನಾರು ತಿಂಗಳಲ್ಲಿ ಅವಳು ಬೆಂಗಳೂರಿಗೆ ಬರುವವಳಿದ್ದಾಳೆ. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ನಾಗಪೂರ (ಮಹಾರಾಷ್ಟ್ರ)ದ ಸಂಜಯ ದೇಶಮುಖನೊಂದಿಗೆ ಮದುವೆಯಾಗಿ ಖಾಯಂ ಆಗಿ ಇರಲು ಬೆಂಗಳೂರಿಗೆ ಬರುವವಳಿದ್ದಾಳೆ. ಬೆಂಗಳೂರಿಗೆ ಬಂದು ಬೆಂಗಳೂರಿನ ನೆಲ, ಜಲ ಮತ್ತು ಹವೆಯಲ್ಲಿ ಪಾಲು ತೆಗೆದುಕೊಳ್ಳುವಳು ಆದರೆ ಕನ್ನಡ ಸಂಸ್ಕೃತಿಯಲ್ಲಿ, ಭಾಷೆಯಲ್ಲಿ! ಇಲ್ಲವೆಂದೇ ಹೇಳಬೇಕು.

ವಸುಮತಿ ಮತ್ತು ಸಂಜಯನ ಮದುವೆ ನಿರ್ಧಾರ ಮಾಡಿದ ದಿನವೇ ನಡೆದುಹೋಯಿತು. ಹನಿಮೂನ ಮುಗಿಸಿ ಭರ ಎಂದು ಹಾರಿ ಬೆಂಗಳೂರಿಗೆ ಹಾರಿ ಬಂದು ಬೆಂಗಳೂರಿನ ಗೂಡಿನೊಳಗೆ ಸೇರಿಕೊಂಡರು. ಬಂದ ದಿನವೇ ವಸುಮತಿ 'ಸಂಜಯ, ನಿಮಗೊಂದು ಆಶ್ಚರ್ಯವಾದ ವಿಷಯ ಹೇಳಲೇ? ಭಾಳ ಮಜಾ ವಿಷಯ ಹೇಳಲೆ?' ಸಂಜಯ ಅವಳನ್ನು ಬರಸೆಳೆದುಕೊಂಡು 'ಮುದ್ದಿನ ಗಿಳಿ, ಹೇಳು ನಾನು ಬಹಳ ಆತುರನಾಗಿದ್ದೇನೆ ನಿನ್ನ ಮಾತು ಕೇಳಲು' ನಾಟಕೀಯವಾಗಿ ಹೇಳಿದನು ಸಂಜಯ. ಕೂಡಲೆ 'ಸಂಜಯ ಕೇಳು, ನಮ್ಮ ಮದುವೆ ನಿಶ್ಚಯವಾದ ಕೂಡಲೆ ನಾನು ಮಾಡಿದ ಮೊದಲ ಕೆಲಸವೇನು ಗೊತ್ತೆ? ಕನ್ನಡ ಭಾಷೆಯನ್ನು ಕಲಿತಿದ್ದು. ನಾನು ಕನ್ನಡ ಭಾಷೆಯನ್ನು ಸುಲಲಿತವಾಗಿ ಮಾತನಾಡುತ್ತೇನೆ' ವಸುಮತಿಯ ಮಾತು ಮುಗಿಯುವದರೊಳಗೆ ಸಂಜಯನು 'ವಸು, ಈಗ ನಾನೂ ಒಂದು ಆಶ್ಚರ್ಯವಾದ ಸಂಗತಿ ಹೇಳುತ್ತೇನೆ ಕೇಳು ಕರ್ನಾಟಕದ ಬೆಂಗಳೂರಿನಲ್ಲಿ ಕನ್ನಡ ಭಾಷೆ ಬೇಕಿಲ್ಲ, ತಮಿಳು ಕಲಿಯಬೇಕಾಗಿತ್ತು.'

ವಸುಮತಿ 'ಹಾ' ಎನ್ನುವ ಮೊದಲೇ 'ವಸು, ಕರ್ನಾಟಕದ ಮಂದಿ ಭಾಳ ಛಲೋ ಇದ್ದಾರ. ಕರ್ನಾಟಕ ಸರಕಾರನೂ ಛಲೋ ಇದ. ಇಲ್ಲಿ ಮಂದಿನ ಛಂದಾಗಿ ಕನ್ನಡ

ಮಾತಾಡುದಿಲ್ಲ. ಇಂಗ್ಲಿಷ ಭಾಷಾದಾಗ ಒಂದೆರಡು ಕನ್ನಡ ಶಬ್ದ ಕೂಡಿಸಿ ಅದಕ್ಕ ಕನ್ನಡ ಭಾಷಾ ಅಂತಾರ. ಇಲ್ಲಿ ಸರಕಾರದ ಕೆಲವು ಮಂತ್ರಿಗಳಿಗೆ ಕನ್ನಡನ ಬರೂದಿಲ್ಲ. ಸರಕಾರದ ಆದೇಶಗಳನ್ನ ಕನ್ನಡದಲ್ಲಿ ಮಾತ್ರ ಅಲ್ಲ ತಮಿಳು ತೆಲುಗು ಮರಾಠಿ ಉರ್ದು ಭಾಷಾದೊಳಗೂ ತೆಗಿತಾರ. ಕನ್ನಡ ಕಲಿರಿ ಅಂತ ಹೇಳವರು ಯಾರೂ ಇಲ್ಲ. ಕಲಿತರ ಈ ನಾಡಿನೊಳಗ ಜೀವನ ಮಾಡಲಿಕ್ಕೆ ಆಗತದ ಅನ್ನೂದು ಇಲ್ಲ. ಅದಕ ಇಲ್ಲಿ ಹತ್ತಾರು ವರ್ಷದಿಂದ ನನ್ನಂಥವರು ಇದ್ರುನೂ ಕನ್ನಡ ಕಲಿಯು ಪ್ರಸಂಗ ಬಂದಿಲ್ಲ.' ಸಂಜಯ ತನ್ನ ಸುದೀರ್ಘ ಮಾತು ಮುಗಿಸಿದಾಗ ವಸುಮತಿ 'ಅಯ್ಯ ಹಂಗಾರ ನಾನು ಕನ್ನಡ ಕಲಿತಿದ್ದು ವ್ಯರ್ಥವಾಯಿತೆನ್ನಿ' ದುಃಖದ ಛಾಯೆಯಲ್ಲಿ ಮಾತು ಮುಗಿಸಿದಳು ಸ್ವಲ್ಪ ಸಮಯ ತಡೆದು ಸಂಜಯನು 'ಹಂಗ್ಯಾಕಂತಿ, ನೀ ಕಲಿತಿದ್ದು ವ್ಯರ್ಥವಾಗುವದಿಲ್ಲ ಪ್ರತಿ ವರುಷ ನವೆಂಬರ ಒಂದರಂದು ನಮ್ಮ ಅಪಾರ್ಟಮೆಂಟದೊಳಗ 'ಕನ್ನಡ ದಿನ' ಆಚರಿಸ್ತಾರ ಆಗ ನೀನ ಕನ್ನಡ ಭಾಷಣಾ ಮಾಡುವಿಯಂತೆ' ಸಂಜಯನು ಮಾತು ಮುಗಿಸಿದಾಗ ವಸುಮತಿ ಕಿಟಿಕಿಯಿಂದ ಹೊರಗೆ ನೋಡುತ್ತಲಿದ್ದಳು. ಅಪಾರ್ಟಮೆಂಟದ ಹೊರಗೆ ಧ್ವಜ ಕಂಬದ ಮೇಲೆ ಯಾವದೋ ದಿನ ಹಾರಿಸಿದ ಕನ್ನಡ ಬಾವುಟ ಕಾಣಿಸಿತು. ಬಾವುಟ ಮಾಸಿತ್ತು ಮತ್ತು ಹರಿದಿತ್ತು.

(ವಸುಮತಿ ಮತ್ತು ಸಂಜಯರ ಮಾತುಕತೆಗಳು ಮರಾಠಿಯಲ್ಲಿ ನಡೆದವು)



ಏನ್ರೀ... ಆರಾಮ...?

– ಬಿ.ಎಚ್. ಕುಲಕರ್ಣಿ

ನಾನೂ ಆರಾಮ ಇರಬೇಕೆಂದು ಆಶಿಸುವುದು ಎಲ್ಲರ ಧರ್ಮ. ''ಸರ್ವೆ ಜನಃ ಸುಖಿನೋಭವಂತು'' ಎಂದು ಆಶೀರ್ವದಿಸುವುದು ದೊಡ್ಡವರೆಂದೆನಿಸಿಕೊಳ್ಳುವವರ ಕರ್ಮ. ಈ ಧರ್ಮ ಕರ್ಮಗಳ ಸಂಯೋಜನೆಯೊಳಗೆ ಎಷ್ಟು ಜನ ಆರಾಮ ಆಗಿರ್ತಾರೋ ಇಲ್ಲ ಆರಾಮ ಇಲ್ಲದೇ ಇರುತ್ತಾರೋ ಅದೆಲ್ಲ ಅವರವರ ದೈವ ಬಲ. ಆದರೂ ಯಾರಾದರೂ ಎಲ್ಲಿಯಾದರೂ ಭೇಟ್ಟಿಯಾದ ಕೂಡಲೇ, ಅಷ್ಟೆ ಯಾಕೆ ದೂರದಿಂದಲೇ ನೋಡಿದ ಕೂಡಲೆ ಸಹಿತ ''ಏನ್ರೀ ಆರಾಮ...?'' ಎಂದು ಒಬ್ಬ ಕೇಳಿದರೆ ''ಹೌದು ಆರಾಮ. ನಿಮ್ಮದು?'' ಎಂಬ ಪ್ರತಿ ಪ್ರಶ್ನೆ ಅದಕ್ಕೆ 'ನಮ್ಮದೂ ಆರಾಮ' ಇದು ಉತ್ತರ. ಇದು ಜಗತ್ತಿನ ಸರ್ವ ಸಾಮಾನ್ಯ ಮಾತಿನ ತುಕಡಿ. ಇಲ್ಲಾ ಶಿಷ್ಠಾಚಾರ. ಈ ತುಕಡಿ ಹೇಳಲಿಕ್ಕೆ ನಿಂತು ಪೂರ್ತಿ ಮಾತು ಮುಗಿಸಿ ಹೋಗಬೇಕೆನ್ನುವ ನಿಯಮವಿಲ್ಲ. ಹೋಗ್ತಾ ಹೋಗ್ತಾ ಹೇಳಕೋತ ಹೋದ್ರು ನಡೆದೀತು. ಆದರೆ ''ಏನ್ರಿ ಆರಾಮ?'' ಎಂದು ಒಬ್ಬ ಕೇಳಿದಾಗ ಎಷ್ಟೆ ಗಡಿಬಿಡಿ ಇದ್ದರೂ, ಸೊನ್ನೆಯಿಂದಾದರೂ ಉತ್ತರವನ್ನು ಕೊಡದಿದ್ದರೆ ಸಮಾಜದ ಈ ಆಟದಾಗ ಫೌಲ ಅಂತ ಹಿಡಿತಾರ. ಅಷ್ಟೇ ಅಲ್ಲ ಮುಂದೆಂದೂ ಅವರ ಕೂಡ ಆರಾಮ ಇರಲಿಕ್ಕಾಗುವದಿಲ್ಲ.

ಹಾಗೆ ಹೇಳಬೇಕೆಂದರೆ ಇಂಥಾ ಮಾತಿಗೆ ಯಾವ ಅರ್ಥವೂ ಇರುವದಿಲ್ಲ. ಬಹಳ ದಿನಗಳ ಮೇಲೆ ಯಾರೋ ಬೆನ್ನ ಬಡಿದು ಭೆಟ್ಟಿಯಾಗುತ್ತಾರೆ. ನಾನೂ ಆರಾಮ, ನೀನೂ ಆರಾಮ, ಈ ಎಲ್ಲ ಮಾತುಗಳು ಮುಗಿದ ಮೇಲೆ ಚಹಾ ಕುಡಿಯಲಿಕ್ಕೆ ಹೋಗುತ್ತೇವೆ. ''ಅದೆಂಥಾ ಸುಡುಗಾಡ ಆರಾಮ ಬಿಡ್ರಿ'' ಎಂಬ ಪ್ರಿಯಾಂಬಲ್‌ನಿಂದ ಪ್ರಾರಂಭವಾಗಿ ತಾವು ಹೇಗೆ ಆರಾಮ ಇಲ್ಲ ಎಂಬುದನ್ನು ವಿವರಿಸುತ್ತಾರೆ. ಆಗ ನಾನೂ ನನ್ನ ಬೇಚೈನಿಯನ್ನು ಹೇಳಿಕೊಳ್ಳುತ್ತೇನೆ. ಮುಂದೆ ಏನೇನು ಮಾತನಾಡುತ್ತೇವೋ ಅದೆಲ್ಲ ನಿನಗಿಂತ ನಾನೆಷ್ಟು ಆರಾಮ ಇಲ್ಲ, ನನಗಿಂತ ನೀನೆಷ್ಟು ಆರಾಮ ಇಲ್ಲ. ಇದೇ ಆಗಿರುತ್ತದೆ. ಅನಂತರ ಇಬ್ಬರಲ್ಲಿ ಯಾರು ಕಡಿಮೆ ದಡ್ಡರಿರುತ್ತಾರೋ ಅವರು ಚಹಾದ ಬಿಲ್ಲನ್ನು ಕೊಡುತ್ತಾರೆ. ಇಬ್ಬರೂ ನಮ್ಮ ನಮ್ಮ ದಿಕ್ಕುಗಳನ್ನು ಹಿಡಿಯುತ್ತೇವೆ. ಹಾಗಾದರೆ ''ಏನ್ರೀ ಆರಾಮ?'' ಎಂದು ಕೇಳಿದಾಕ್ಷಣ ಇಬ್ಬರೂ 'ಹೌದು ಆರಾಮ' ಎಂದು ಹೇಳಿದ್ದು ಸುಳ್ಳೇನು? ಇಲ್ಲಾ, ಖಂಡಿತಾ ಇಲ್ಲ, ಇಂಥಾ ಮಾತುಗಳಿಗೆ ಸುಳ್ಳು ಅಂತ ಅನ್ನುವುದಿಲ್ಲ. ಜೀವನದ ಕೆಲವು ಕ್ಷಣಗಳನ್ನು ಉಳಿಸಲಿಕ್ಕೆ ಉತ್ಪನ್ನವಾದ ಶಬ್ದಗಳ ರಾಶಿ ಇವು. ಇಲ್ಲವಾದಲ್ಲಿ 'ಏನ್ರೀ ಆರಾಮ?' ಎಂದು ಒಬ್ಬರು ಕೇಳಿದಾಗ ನಾಸ್ಟೇಗೆ ಆರಾಮ ಇಲ್ಲಾ ಎಂದು ಇನ್ನೊಬ್ಬರು ಕೊರೆಯಲಿಕ್ಕೆ ಪ್ರಾರಂಭಿಸಿದರು, ಮತ್ತೂ ಇಂಥಾ ಎಂಟ್ಹತ್ತು ಜನ ದಿನದಲ್ಲಿ ಸಿಕ್ಕರೆಂದರೆ ಆ ದಿನ ಮುಗಿತೆಂದೇ ಅರ್ಥ.

''ಏನ್ರೀ ಆರಾಮ? ಹೌದು ಆರಾಮ. ನಿಮ್ದು?...'' ಈ ಶಿಷ್ಟಾಚಾರ ಅನುಸರಿಸುವವರದು ಕಟ್ಟದೇ ಇರುವ ಒಂದು ದೊಡ್ಡ ಸಂಸ್ಥೆಯಾದರೂ ಅದಕ್ಕೆ ವ್ಯತಿರಿಕ್ತವಾಗಿ ವ್ಯವಹರಿಸುವವರಿಗೇನೂ ಕೊರತೆ ಇಲ್ಲ. ಇವರೆಲ್ಲ ಸ್ವತಂತ್ರ ಪಕ್ಷದ ಉಮೇದುವಾರರ ತರಹ. ಇಂಥವರಿಗೆ ಅದೆಷ್ಟೋ ಸಲ 'ಏನ್ರೀ ಆರಾಮ' ಎಂಬ ಪ್ರಶ್ನೆ ಕೇಳಿ ನಮ್ಮ ಆರಾಮ ಕಳೆದುಕೊಳ್ಳುವ ವೆಳ್ಯನೂ ಬಂದಿವೆ. ಎಲ್ಲಾ ವ್ಯಾಳ್ಯ ಓಂಗS ಇರ್ತದ ಅಂತ ಹೇಳಿಲಿಕ್ಕಾಗೋದಿಲ್ಲ. ವೇಳೆ ಏನು ಹೇಳಿ ಕೇಳಿ ಬರ್ತದ?

ಅವತ್ತು ಶಿಸ್ತಾನ ಕಾಕಾನನ್ನ ಪೇಟೆಯಲ್ಲಿ ನೋಡಿದೆ. ಈ ಶಿಸ್ತಾನ ಕಾಕಾ ಅಂದರೆ ಕಂಡಾಪಟಿ ಖಡಕ್ ಅಂತಾ ಕೇಳಿದ್ದೆ. ಒಂದೆರಡು ಸಲ ಅವರ ಮನೆಯಲ್ಲಿ ಭೇಟ್ಟಿನೂ ಆಗಿದ್ದೆ. ಗುರ್ತದ ಅಂದ ಮೇಲೆ ಮಾಮೂಲಿ ಪ್ರಶ್ನೆ ಮಾಡಿದೆ. 'ಏನ್ರೀ ಆರಾಮ?' ನನ್ನ ಮಾರಿ ಕಡೆಗೇನೇ ಸ್ವಲ್ಪ ಹೊತ್ತ ನೋಡಿದ ಆಸಾಮಿ ''ಇಲ್ಲ, ಆರಾಮ ಇಲ್ಲ, ಮುಂದೇನ ಮಾಡಾವಿದ್ದಿ ಹೇಳು'' ಎಂದು ಖಡಾತುಂಡವಾಗಿ ನುಡಿದು ಮುಂದೆ ಹೋಗಬೇಕ? ನಾ ಆರಾಮ ಕಳೆದುಕೊಂಡು ಮನೆಗೆ ಬಂದೆ.

ಇನ್ನು ಕೆಲವರಿಗೆ 'ಏನ್ರಿ ಆರಾಮ?' ಎಂದು ಕೇಳಿದರೆ ಸಾಕು, ತಮ್ಮ ಗಂಟು ಬಿಚ್ಚುತ್ತಾರೆ. ''ಅಂದರೆ... ನಾವು ದಿನಾಲು ಮುಂಜಾನೆ ತಿರುಗಾಡಲು ಹೋಗುತ್ತೇವಲ್ಲS! ಆ ಆಲ್ಹಾದಕರ ಹವೆಯಂತೆ ನಮ್ಮ ಮನಸ್ಸೂ ಪ್ರಸನ್ನವಾಗಿರುತ್ತದೆ. ಹೂದೋಟದಲ್ಲಿ ಕೆಲಸ ಮಾಡುತ್ತೇವಲ್ಲS! ಹೂವಿನ ಸಹವಾಸದಲ್ಲಿ ಮಂದವಾದ ಶಾಸ್ತ್ರೀಯ ಸಂಗೀತದ ಇಂಪಿನಲ್ಲಿ ಜೀವನ ಅದೆಷ್ಟು ರಮ್ಯ, ಆರಾಮದಾಯಕ...'' ಹೀಗೆ ಅವರ ಗಂಟು ಬಿಚ್ಚುವಿಕೆ ಅವರ ಮುಂಜಾನೆಯಿಂದ ಪ್ರಾರಂಭವಾಗಿ, ರಾತ್ರಿ ಮಲಗುವವರೆಗಿನ ದಿನಚರಿಯಾಗಿರುವದು. ಅಷ್ಟೇ ಅಲ್ಲ ಅವರು ಆರಾಮ ಇರಲಿಕ್ಕೆ ಕಾರಣೀಭೂತನಾದ ಕರ್ತೃ, ಕರ್ಮ, ಕ್ರಿಯಾಪದಗಳನ್ನೆಲ್ಲ ವಿವರಿಸಿದಾಗ 'ಇವ್ರು ಆರಾಮರೆ ಯಾಕ ಇದ್ದಾರೊ' ಅನ್ನುವ ಅಸುರಿ ಭಾವನೆ ಮನದಲ್ಲಿ ಬರದೇ ಇರದು.

ವೇಳೆ ಬಿಟ್ಟು ವೇಳೆಯೊಳಗೆ 'ಏನಪಾ ಆರಾಮ?' ಎಂದು ಕೇಳಿದ ಪ್ರಶ್ನೆ ಎಷ್ಟು ಆಘಾತಕಾರಿಯಾದೀತು ಎನ್ನುವ ಕಲ್ಪನೆ ಬಂದಿದ್ದು ಮೊನ್ನೆ ಮೊನ್ನೆ ಆ್ಯಕ್ಸಿಡೆಂಟಾಗಿ ತಲೆಗೆ ಪೆಟ್ಟು ಬಿದ್ದ ಗೆಳೆಯನನ್ನು ನೋಡಲು ಹಾಸ್ಪಿಟಲ್‌ಗೆ ಹೋದಾಗ. ಚೇತರಿಸಿಕೊಳ್ಳುತ್ತಿದ್ದ ಅವನಿಗೆ 'ಏನಪಾ ಆರಾಮ?' ಎಂದಿದ್ದೆ ತಡ, ಮಲಗಿದ್ದ ಅವನು ಜಿಗಿದು ಎದ್ದು ಕುಳಿತ. 'ಆರಾಮ ಅದ' ಅಂದ. 'ಇನ್ನೂ ಆರಾಮ ಇರಬೇಕಾದ್ರೆ ಒಂದು ಸಿಗರೇಟ ತಂದಕೊಡು' ಅಂದ. ಆ ಕಡೆ - ಈಕಡೆ ನೋಡಿ 'ಬೇಗ'ನೂ ಅಂದ. ಸಿಗರೇಟ ಸೇದಲು ಮನಾಯಿ ಇರುವ ಹಾಗೂ ಕಡಿಮೆ ಸ್ಮರಣಶಕ್ತಿ ಇರುವ ಗೆಳೆಯನನ್ನು ಸ್ವಲ್ಪ ಹೊತ್ತು ತಪ್ಪಿಸಲು ಹೊರಗೆ ಬಂದು, ವೇಳೆ ಕಳೆಯುವ ಸಲುವಾಗಿ ಕೆಳಗಡೆ ಇರುವ ಸಿಗರೇಟ ಅಂಗಡಿಯ ಮುಂದೆ ನಿಂತು ನಾನೊಂದು ಸಿಗರೇಟ ಸೇದಿ ಅವನ ಹತ್ತಿರ ಹೋದೆ. ಸ್ವಲ್ಪ ಹೊತ್ತಿನ ನಂತರ ಪುನಃ ಪುನಃ 'ನಾನು ಆರಾಮ ಇರಬೇಕಾದ್ರ ನನಗೊಂದು ಸಿಗರೇಟ ತಂದುಕೊಡು' ಎಂದೆನ್ನುವುದಕ್ಕೆ ಪ್ರಾರಂಭಿಸಿದ್ದ. ಅವನು ಯಾವಾಗ ಯಾವಾಗ ಈ

ವಾಕ್ಯಗಳನ್ನು ಹೇಳಿದನೋ ಅವಾಗ ಅವಾಗೆಲ್ಲಾ ನಾನು ಸಿಗರೇಟ ಸೇದಿ ಸೇದಿ ಬರುತ್ತಿದ್ದೆ ಹಾಗೂ ನನ್ನ ಆರಾಮನ್ನು ಹಾಳುಮಾಡಿಕೊಂಡಿದ್ದೆ ಮುಂದಿನ ಎಂಟು ದಿನಗಳಲ್ಲಿ.

ಇನ್ನು ಒಮ್ಮೊಮ್ಮೆ 'ಏನ್ರೀ ಆರಾಮ?' ಈ ಪ್ರಶ್ನೆ ಎಲ್ಲಿ ಬೇಕೋ ಅಲ್ಲಿ ಇಲ್ಲದೇ ಇರುವುದೇ ಇದರ ವಿಪರ್ಯಾಸವೇನೋ ಎಂದೆನಿಸುವದು. ರೈಲಿನ ಟಿಸಿನೋ ಇಲ್ಲಾ ಬಸ್ಸಿನ ಕಂಡಕ್ಟರನೋ ಗೊಗ್ಗರ ಧ್ವನಿಯೊಳಗ 'ಟಿಕೆಟ್ ತೊಗೋರಿ ಟಿಕೆಟ್' ಎಂದು ಚೀರಾಡಿ ಬಸ್ಸಿನ ತಗಡಿಗೆ ಬಡದು ಸಪ್ಪಾ ಮಾಡುವ ಬದಲು ಸಮೀಪ ಬಂದು ಮಂದಹಾಸ ಬೀರಿ, ಸ್ವಲ್ಪ ಬಗ್ಗಿ, ಮೆಲು ಧ್ವನಿದೊಳಗೆ 'ಏನ್ರೀ ಆರಾಮ, ಟಿಕೇಟ ಕೊಳ್ತಿರಿ?' ಅಂದರೆ ಎಷ್ಟು ಚೆನ್ನಾಗಿರುತ್ತದೆ ಎಂದೂ ಕೂಡ ಒಮ್ಮೊಮ್ಮೆ ಹಗಲುಗನಸು ಬೀಳುವುದು. ಒಂದು ವೇಳೆ ಕನಸುಗಳಿಗೇನಾದರೂ ಪೌಡರ ಸ್ನೋ ಹಚ್ಚಿಕೊಂಡು ಮೇಕಪ್ ಮಾಡಿಕೊಂಡು ಫ್ಯಾಶನ್ ಶೋಗೆ ಹೋಗಲಿಕ್ಕೆ ಪರವಾನಗಿ ಇತ್ತಂದ್ರೆ, ಈ ನನ್ನ ಕನಸೂ ಸುಂದರ ಕನಸುಗಳಲ್ಲಿ ಒಂದಾಗಬಹುದಿತ್ತು.

ಇನ್ನು ಸರ್ಕಾರಿ ಕಚೇರಿಗಳಲ್ಲಿ ಏನಾದರೂ ಯಾರಾದರೂ (ಸೌಜನ್ಯ ಸಪ್ತಾಹದಲ್ಲಾದರೂ) ಹೋದಾಗ ತಯಾರಾಗಿ ಕುಳಿತ ಉದ್ಯೋಗಿಗಳು ತಮ್ಮ ತಯಾರಿ ಮರೆತು 'ಬರ್ರಿ, ಕೂಡ್ರಿ, ಏನ ಆರಾಮ?' ಅಂತ ಏನರೆ ಕೇಳಿಬಿಟ್ರ, ಎದುರಿಗಿದ್ದ ವ್ಯಕ್ತಿ ಮೂರ್ಛೆ ಬಿದ್ದರೆ ಆಶ್ಚರ್ಯವೇನಿಲ್ಲ.

ಹೊಸದಾಗಿ ಮನೆ ಕಟ್ಟುತ್ತಿರುವವರಿಗೇನಾದರೂ 'ಏನ್ರೀ ಆರಾಮ' ಎಂದು ಕೇಳಿದರೆ, ಅಪ್ಪಿ ತಪ್ಪಿಯಾದರೂ ಶಿಷ್ಟಾಚಾರದ ಉತ್ತರ ಅವರಿಂದ ಬಂದಿತೆಂದರೆ ಅವರ ದೇವರಾಣೆಯಾದೀತು. ಎಷ್ಟೋ ಸಲ ಅವರು ಕೊಡುವ ಉತ್ತರದಿಂದ ಗೊತ್ತಾಗುತ್ತದೆ, ಅವರು ಕಟ್ಟುವ ಮನೆ ಯಾವ ಹಂತದಲ್ಲಿ ಬಂದಿದೆ ಎಂದು. 'ನಿಮ್ಮ ಹೆಸರ ಹೇಳ್ರಿ, ಒಂದು ಬಣ್ಣದ ಹೆಸರ ಹೇಳ್ರಿ. ಒಂದು ಹೂವಿನ ಹೆಸರ ಹೇಳ್ರಿ' ಎಂದು ನಮ್ಮ ಬಾಯಿಂದ ಹೇಳಿಸಿ ಕುಕ್ಕರ ಕಾಲಗಳ ಮೇಲೆ ಕೂಡ್ರಿಸಿ ತಾವೂ ದಾರಿಯ ಪಕ್ಕದಲ್ಲೇ ಕುಳಿತು, ಈ ಹೆಸರುಗಳ ಮೇಲಿನಿಂದಲೇ ನಮ್ಮ ಇಹಪರಗಳ ಭವಿಷ್ಯ ಹೇಳುವ ಪ್ರಭೃತಿಗಳು ಇರಬೇಕಾದರೆ, 'ಏನ್ರೀ ಆರಾಮ' ಎಂದು ಕೇಳಿ, ಅದರ ಉತ್ತರದಿಂದ ಕಟ್ಟುವ ಮನೆ ಯಾವ ಹಂತದಲ್ಲಿದೆ ಎಂದು ಹೇಳುವದರಲ್ಲಿ ಏನೂ ಆಶ್ಚರ್ಯವೇನಿಲ್ಲ. ಇದೂ ಒಂದು ಕೋಷ್ಟಕ ಇಲ್ಲಾ ಅರ್ಥಕೋಶ ಇದ್ದಾಂಗನS.

ಮನೆ ಕಟ್ಟುವ ಭೂಪನಿಗೆ 'ಏನ್ರೀ ಆರಾಮ' ಎಂದು ಕೇಳಿದಾಗ 'ಆರಾಮ ಹರಾಮ ಹೈ' ಎಂಬ ಉತ್ತರ ಏನಾದರೂ ಬಂದಿತೆಂದರೆ ಸಾಲ ಮಂಜೂರಾಗಿದೆ, ದುಡ್ಡು ಕೈಯಲ್ಲಿ ಬಂದಿದೆ, ಕೆಲಸ ಜೋರಿನಿಂದ ಪ್ರಾರಂಭವಾಗಿದೆ ಎಂದೇ ಅರ್ಥ.

'ಹೂ, ಇಷ್ಟರಮಟ್ಟಿಗೆ' ಎಂದುತ್ತರ ಬಂದರೆ, ದುಡ್ಡು ಮುಗಿದಿದೆ, ಮುಂದಿನ ಕಂತಿನ ದಾರಿ ಕಾಯುತ್ತಿದ್ದಾರೆ.

'ನಾ ಆರಾಮ ಇದ್ರ ಎಷ್ಟು, ಬಿಟ್ಟರೆ ಎಷ್ಟು, ನಿಮ್ಮ ದಾರಿ ನೀವು ನೋಡಿಕೊಳ್ಳಿರಿ' ಎಂದುತ್ತರ ಬಂದರೆ ಕೈಯಲ್ಲಿ ದುಡ್ಡು ತೀರಿದೆ. ಮನೆ ಅರ್ಧಕ್ಕೆ ನಿಂತಿದೆ, ಯಾರೂ ದುಡ್ಡು ಕೊಡಶಾ ಇಲ್ಲ ಎಂದೇ ಅರ್ಥ.

'ಯಾಕ ಹ್ಯಾಂಗ ಕಾಣ್ತದ' ಎಂದು ಟೀವಿಯಿಂದ ಉತ್ತರ ಬಂದರೆ ಸಾಲದ ಕಂತು ಬಂದಿದೆ. ನಿಂತ ಮನೆ ಕಟ್ಟುವಿಕೆ, ಪುನಃ ಪ್ರಾರಂಭವಾಗಿದೆ ಎಂದೇ ಅರ್ಥ.

'ಏನ್ರೀ ಆರಾಮ?' ಈ ಪ್ರಶ್ನೆಗೆ ಅವರೇನಾದರೂ ಮೌನವಾಗಿ ದಿಟ್ಟಿಸಿ ನೋಡಿ ಮುಂದೆ ಹೊರಟು ಹೋದರೆ, ಮನೆ ಕಟ್ಟುವುದು ಮುಗಿದಿದೆ, ದುಡ್ಡು ಮುಗಿದಿದೆ. ಸಾಲ ಬಹಳೇ ಆಗಿದೆ ಎಂದೇ ಅರ್ಥ.

'ಯಾಕ ಸಲೈನ್ ಹಚ್ಚಿಕೊಂಡವರ ಹಾಗೆ ಕಾಣುತ್ತೇನೇನು' ಎಂಬ ಉತ್ತರವೇನಾದರೂ ಬಂದರೆ ಸಾಲಗಾರರ ಕಾಟ ಬಹಳೆ ಆಗಿದೆ ಎಂದೇ ತಿಳಿಯಬೇಕು.

'ಸಂದೇನೋ ಆರಾಮದ, ಆದ್ರ ನಿಮ್ಮ ಆರಾಮ ಕಳಕೊಬ್ಯಾಡ್ರಿ' ಎಂದು ಮಂದಿಸ್ಮಿತರಾಗಿ ನುಡಿದರೆ ಸಾಲ ಕೇಳಲಿಕ್ಕೆ ನಿನ್ನನ್ನೇ ಗುರಿ ಮಾಡಿಕೊಂಡಿದ್ದಾನೆಂದೇ ಅರ್ಥ.

ಹೇಗೆ ರಾಶಿ ಚಕ್ರದಲ್ಲಿ ಯಾವ ಯಾವ ಗ್ರಹ ಯಾವ ಯಾವ ಮನೆಯಲ್ಲಿದ್ದರೆ ಯಾವ ಯಾವ ಫಲ ಕೊಡುತ್ತದೆ ಎಂದು ಹೇಳಬಹುದೋ ಹಾಗೇ ಯಾವ ಯಾವ ಉತ್ತರದಿಂದ ಮನೆ ಯಾವ ಯಾವ ಹಂತಕ್ಕೆ ಬಂದಿದೆ ಎನ್ನುವುದನ್ನು ಹೇಳಲಿಕ್ಕೆ ಜ್ಯೋತಿಷಿಗಳ ಅವಶ್ಯಕತೆ ಇಲ್ಲ.

ಇಂಥಾ ಅಗಮ್ಯ ವೀರಾಟ ಸ್ವರೂಪವನ್ನೆ ತನ್ನಲ್ಲಿ ಹುದುಗಿಸಿಕೊಂಡ ಈ 'ಏನ್ರೀ ಆರಾಮ?' ಇದೊಂದು ಚಿದಂಬರ ರಹಸ್ಯವಾಗಿದೆ. ಇಷ್ಟು ಜನ ಆರಾಮೇನು, ಆರಾಮೇನು ಎಂದು ಕೇಳಿ ಕೇಳಿ, ಆರಾಮ ಇಲ್ದೆ ಇರುವವರನ್ನು ನೋಡಿ, ಹಾಗಾದ್ರೆ ಆರಾಮ ಇರೂದಂದ್ರೆ, ಏನು? ಎಂದು ವಿಚಾರ ಮಾಡುತ್ತಿರುವಾಗ, ನಾರಾಯಣ ದಾಸರ ಕೀರ್ತನೆ ಧ್ವನಿ ಸೊಗಸಾಗಿ ಕೇಳಿ ಬಂದಿತು. 'ಆದ್ದರಿಂದ ಮಹಾರಾಜ... ಇಂದಿನ ದಿನವೇ ಸುದಿನ. ಈ ಕ್ಷಣವೇ ಸುಕ್ಷಣ. ಕ್ಷಣ ಕ್ಷಣಗಳನ್ನು ಸರಿಯಾದ ರೂಪದಲ್ಲಿ ಒಳಗಿನಿಂದ ಅನುಭವಿಸುವದೇ ಆರಾಮ ಇರುವದರ ಲಕ್ಷಣ. ಇದನ್ನು ಅರಿಯದವನೇ ಆರಾಮ ಇರಬೇಕೆಂದರೂ ಆರಾಮ ಇಲ್ಲದೇ ಇರುವದು... ಇದೇ ಅದರ ಸತ್ಯ. ಆದ್ದರಿಂದ ಯಾವ ಈ ಪ್ರಕಾರವಾಗಿ ಮಹಾರಾಜ... ಹುಡುಕದಿರೊ ಆರಾಮನ್ನ ಹೊರಗೆ. ಅದು ಇಲ್ಲೊ ಹೊರಗೆ, ಇರುವುದೆಲ್ಲ ಒಳಗೆ ಒಳಗೆ... ಪುಂಡಲೀಕವರದೇ ಹರಿ ವಿಠ್ಠಲ. ವೇಂಕಟರಮಣ ಗೋವಿಂದಾ ಗೋವಿಂದಾ...''

> ಇರಬಹುದು
> ಹಾಸ್ಯಕ್ಕೆ ನೂರೆಂಟು
> ಮುಖ
> ಆದರೆ
> ಮೊದಲಿಗನಲ್ಲವೆ ಸು
> ಮುಖ
>
> – ಬೇಲೂರು ರಾಮಮೂರ್ತಿ.

ಒಂದು ಮಾರ್ಕ್ಸ್ ಸಿಗುತ್ತೆ...

– ಪ್ರಭಾ

''ಒಂದು ಮಾರಿದರೆ ಒಂದು ಮಾರ್ಕ್ಸ್ ಸಿಗುತ್ತೆ ಸಾರ್...'' ಅಂದ ಆ ಹುಡುಗ. ಮಧ್ಯಾಹ್ನದ ಹೊತ್ತು, ಹೊರಲಾರದಷ್ಟು ಭಾರವಿದ್ದ ದೊಡ್ಡ ಬ್ಯಾಗನ್ನು ಹೊತ್ತು ನನ್ನ ಮಗನ ವಯಸ್ಸಿನ ಹುಡುಗ ರಸ್ತೆಯ ಆ ತುದಿಯಿಂದ ಒಂದೊಂದು ಮನೆಯನ್ನೂ ಹೊಕ್ಕು ಆಚೆ ಬರುವುದನ್ನು ಮನೆಯ ಹಾಲಿನಲ್ಲಿ ಕುಳಿತು ಟೀವೀ ನೋಡುತ್ತಾ ಬಾಯಾಡಿಸುತ್ತಾ ಅವಲೋಕಿಸುತ್ತಿದ್ದೆ. ನಮ್ಮ ಮನೆಯ ಮುಂದೆ ಬಂದವನು ಗೇಟು ತೆರೆದು ನೇರ ಮುಂಬಾಗಿಲ ಬಳಿ ಬಂದ. ''ಸಾರ್ ನಮಸ್ಕಾರ...'' ಅಂದ.

ಮಾಮೂಲಿ ಸೇಲ್ಸ್ ಮಾನ್‌ಗಳನ್ನ ಪ್ರತಿದಿನ ನೋಡಿ ನೋಡೀ ಅಭ್ಯಾಸವಾಗಿದ್ದ ನನಗೆ ಹೇಳದೇ ಕೇಳದೇ ಬಾಗಿಲು ತೆರೆದು ಒಳಗೆ ಬಂದಿದ್ದಕ್ಕೆ ಬೈದು ಹುಡುಗನನ್ನು ಓಡಿಸಬೇಕೆಂಬ ತವಕ ಹೆಚ್ಚಾದರೂ ಅದೇನು ಮಾಡಲು ಬಂದಿದ್ದಾನೋ ನೋಡಬೇಕು ಮತ್ತು ಅವನನ್ನು ಕೊಂಚ ರೇಗಿಸಿ ಕಳಿಸಬೇಕೆಂಬ ಅನಿಸಿಕೆ ಆ ಕ್ಷಣದಲ್ಲಿ ಮೂಡಿತು.

ಅವನ ನಮಸ್ಕಾರಕ್ಕೆ ಪ್ರತಿಯಾಗಿ ತಲೆಯಾಡಿಸಿದೆ. ''ಯೆಸ್...'' ಅಂದೆ. ಮನೆ ಮುಂದೆ ಬರುವ ಸೇಲ್ಸ್‌ಮನ್ನುಗಳು ಅವರ ಮಾತುಗಳನ್ನು ಪಟಪಟನೇ ಇಂಗ್ಲಿಷಿನಲ್ಲಿ ಉದುರಿಸುವುದನ್ನು ಅಭ್ಯಾಸ ಮಾಡಿಕೊಂಡ ನಂತರ ಯಾರನ್ನೇ ಆಗಲಿ ಕನ್ನಡದಲ್ಲಿ ಮಾತನಾಡಿಸುವುದಿಲ್ಲ, ಅವರು ಇಂಗ್ಲಿಷಿನಲ್ಲಿ ಎಲ್ಲವನ್ನೂ ಹೇಳಿದ ನಂತರ ಕನ್ನಡ ಬರುತ್ತೇ ಅಂತ ಕೇಳಿ ಅವರಿಗೆ ಕನ್ನಡದಲ್ಲಿ ವಿವರಣೆ ಕೇಳಿ ನಂತರ ನಾನು ಯಾವುದನ್ನೂ ಕೊಳ್ಳುವುದಿಲ್ಲ ಅಂತ ಹೇಳಿ ಕಳಿಸೋದು ನನ್ನ ಅಭ್ಯಾಸ. ಅಕಸ್ಮಾತ್ ಮಾರಾಟಗಾರರಿಗೆ ಕನ್ನಡ ಬರೋದಿಲ್ಲ ಅಂತ ಗೊತ್ತಾದರೆ ಅಯ್ಯಾ ಇದು ಕನ್ನಡ ನಾಡು ಏನಾದರೂ ಮಾರಬೇಕಿದ್ದರೆ ಮೊದಲು ಕನ್ನಡ ಕಲಿತು ಬನ್ನಿ ಅಂತಲೋ ಕನ್ನಡದಲ್ಲಿ ಮಾತನಾಡಿದರೆ ಮಾತ್ರ ನಿಮ್ಮ ಹತ್ತಿರ ವ್ಯಾಪಾರ ಅಂತಲೋ ಹೇಳಿ ಕಳಿಸುವುದು ನನ್ನ ಮತ್ತೊಂದು ಪರಿಪಾಠ. ಹೀಗಿರಬೇಕಾದರೆ ಈ ಹುಡುಗ ಮೊದಲೇ ನಮಸ್ಕಾರಾ ಸಾರ್ ಅಂದಿದ್ದು ಕೇಳಿ ಇದು ನಮ್ಮ ಕನ್ನಡದ ಕೂಸೇ ಅನಿಸಿತು.

''ಸಾರ್, ಐ ಹ್ಯಾವ್ ಗಾಟ್ ಸೂಯಿಂಗ್ ಮೆಷೀನ್ಸ್....'' ಅಂತ ಹುಡುಗ ಮಾತು ಆರಂಭಿಸಿತು. ''ಕನ್ನಡ ಬರುತ್ತೇ...?'' ಅಂದೆ ಗಂಭೀರವಾಗಿ ''ಸಾರ್, ನಾನು ಕನ್ನಡದವನೇ ಸಾರ್...'' ಅಂದ ಹುಡುಗ. ಅವನ ಮುಖದಲ್ಲಿ ಅದೇನೋ ಒಂದು ರೀತಿಯ ಸಂತೋಷ ಕಾಣಿಸಿತು.

''ಹೂಂ, ಹೇಳಪ್ಪಾ ದೊರೇ ಅದೇನಿದೆ ಬ್ಯಾಗಲ್ಲೀ....'' ಅಂದೆ. ಹುಡುಗನ ಮುಖದಲ್ಲಿ ನಗೆ ಮೆಲ್ಲಗೆ ಹರಡಿತು. ''ಸಾರ್, ಸೂಯಿಂಗ್ ಮೆಷೀನು ಸಾರ್ ಕೈಯಲ್ಲೇ ಇಟ್ಟುಕೊಂಡು ನೀವು ಹೊಲೀಬಹುದು ಸಾರ್...'' ಅಂತ ಬ್ಯಾಗಿನಿಂದ ಒಂದು ಪುಟ್ಟ ಮೆಷೀನು ತೆಗೆದ. ''ಸ್ಟ್ಯಾಪ್ಲರ್ ಇದೆಯಲ್ಲಾ ಸಾರ್ ಅದೇ ರೀತಿಯಲ್ಲಿ ಇದು ಕೆಲಸ

ಮಾಡುತ್ತೆ..." ಅಂದ. "ಸ್ಟ್ಯಾಪ್ಲರಾ? ಏನು ಹಾಗಂದರೆ...?" ಅಂದೆ. "ಏನು ಸಾರ್, ತಮಾಷೆ ಮಾಡ್ತೀರಾ? ಸ್ಟ್ಯಾಪ್ಲರ್ ಅಂದ್ರೆ ನಿಮಗೆ ಗೊತ್ತಿಲ್ವಾ? ಸಾರ್...." ಅವನ ಮುಖದಲ್ಲಿ ನಗೆ ವಿಸ್ತಾರ ವಾಗುತ್ತಿತ್ತು. "ಸ್ಟ್ಯಾಪ್ಲರ್ ಅಂದರೆ ನನಗೆ ಖಂಡಿತ ಗೊತ್ತಿಲ್ಲಪ್ಪಾ..." ಅಂದೆ. ಮೆಷೀನು ಆಚೆ ತೆಗೆದ "ನೋಡೀ ಸಾರ್ ಹೀಗೆ ಹೊಲಿದುಕೊಳ್ಳಬಹುದು...." ಅಂತ ಡೆಮಾನ್ ಸ್ಟ್ರೇಷನ್ನು ಶುರು ಮಾಡಿದ. "ಬೇಡಪ್ಪಾ ದೊರೆ, ಅದು ಎರಡೇ ದಿವಸಕ್ಕೆ ಕೆಟ್ಟು ಹೋಗುತ್ತೆ. ಅದರ ರಿಪೇರಿ ಗೊತ್ತಿದೆಯಾ ಹೇಳು ನನ್ನ ಹತ್ತಿರ ಒಂದು ಇದೆ. ನಿನ್ನ ತರಹವೇ ಯಾವುದೋ ಹುಡುಗ ತಂದುಕೊಟ್ಟ, ಕೆಟ್ಟುಹೋಗಿದೆ..." ಅಂದೆ. "ನನ್ನ ತರಹದ ಹುಡುಗನೇ ಸಾರ್? ನಾನು ಇವತ್ತೇ ಬಂದಿರೋದು ಸಾರ್..."

"ನಿನ್ನ ತರಹ ಅಂದರೆ ನಿನ್ನ ತರಹವೇ ಒಬ್ಬ ಸೇಲ್ಸ್‌ನವರು ಅಂತ..."

"ಇಲ್ಲ ಸಾರ್ ರಿಪೇರಿ ಬರುಲ್ಲ ಬರೀ ಮಾರೋದು ಮಾತ್ರಾ... ಇದು ಕೊಡಲಾ ಸಾರ್...?"

ಬೇಡ ಅಂದೆ. ಬ್ಯಾಗಿನಿಂದ ಮತ್ತೊಂದು ಕಟ್ಟು ಆಚೆ ತೆಗೆದ. "ನೋಡೀ ಸಾರ್ ಇದು ವರ್ಲ್ಡ್ ಜಾಗ್ರಫಿ. ಅಂಗಡೀಲಿ ಇದಕ್ಕೆ ನಾನ್ನೂರಾಗುತ್ತೆ. ಇದನ್ನು ಇವತ್ತು ಮಾತ್ರಾ ನೂರಕ್ಕೆ ಐವತ್ತಕ್ಕೆ ಕೊಡ್ತೀವಿ...." "ಬೇಡಪ್ಪಾ ಮನೇಲಿ ಯಾರೂ ಓದೋದಿಲ್ಲ" ಅಂತ ಅದನ್ನೂ ರೆಫ್ಯೂಸು ಮಾಡಿದೆ. "ಸಾರ್, ಸಾಕ್ಸು? ಒಳ್ಳೇ ಕ್ವಾಲಿಟೀದು ಇದೆ ಸಾರ್. ಅಂಗಡೀಲಿ ನೂರಾ ಎಂಬತ್ತು ಆಗೋದು ಬರೀ ನೂರಕ್ಕೆ ಕೊಡ್ತೀವಿ... ಸಾರ್...." ಅದನ್ನೂ ಬೇಡ ಅಂದೆ.

ಹುಡುಗ ಬೇಜಾರಿಲ್ಲದೆ ಅವನ ಹತ್ತಿರವಿದ್ದ ಗ್ಯಾಸ್ ಲೈಟರು, ಕತ್ತಿ, ಚಾಕು, ನಾನ್‌ಸ್ಟಿಕ್ ತವ ಎಲ್ಲವನ್ನೂ ತೋರಿಸಿದ. ಅಂಗಡೀಲಿ ಅದಕ್ಕೆ ಎಷ್ಟು ಬೆಲೆ - ಇವನ ಹತ್ತಿರ ತಗೊಂಡರೆ ಅದನ್ನು ಎಷ್ಟು ಕಮ್ಮೀಗೆ ಕೊಡ್ತಾನೆ ಮೊದಲಾದ ವಿವರಗಳನ್ನು ನೀಡಿದ.

"ಎಷ್ಟು ಸಿಗುತ್ತೆ ನಿನಗೆ ಇದನ್ನು ಮಾರಿದರೆ...?" ಅಂದೆ. ಆಗಲೇ ಹುಡುಗ ಹೇಳಿದ್ದು. "ಒಂದು ಮಾರ್ಕ್ಸ್ ಸಿಗುತ್ತೆ..." ಅಂತ.

ಇದು ಯಾವುದು ಒಂದು ಮಾರ್ಕ್ಸ್ ಸಿಗೋಂಥಹ ಕೆಲಸ ಅಂತ ಕುತೂಹಲ ಹುಟ್ಟಿತು. "ಏನು ಓದ್ತಾ ಇದೀಯಾ...." ಅಂದೆ. ಮಾರ್ಕೆಟಿಂಗ್ ಫಸ್ಟ್ ಇಯರು... ಅಂತ ಉತ್ತರ ಬಂತು. "ಯಾವ ಕಾಲೇಜು....?" ಅಂದೆ. "ನಮ್ಮದು ಈ ಊರಲ್ಲ ಸಾರ್.... ಅಂದ. ಯಾವೂರು....?" ನಮ್ಮದು ತಿಪಟೂರು ಸಾರ್. ಮಾರ್ಕೆಟಿಂಗ್‌ನಲ್ಲಿ ನಮಗೆ ಇದೊಂದು ಸಬ್ಜೆಕ್ಟು. ಅದಕ್ಕೆ ಟ್ರೈನಿಂಗ್‌ಗೆ ಬಂದಿರೋದು...."

"ಅಂದರೆ ನಿಮಗೆ ಕಾಸುಗೀಸು ಏನೂ ಕೊಡುಲ್ಲವೇ?" ಇಲ್ಲ ಅಂತ ತಲೆಯಾಡಿಸಿದ.

ಆಶ್ಚರ್ಯವಾಯಿತು. "ಮತ್ತೆ ಬಿಟ್ಟೀ ಕೆಲಸವೇ?" ಅಂದೆ. "ಬಿಟ್ಟಿ ಅಲ್ಲಾ ಸಾರ್. ಒಂದು ಐಟಂ ಮಾಡಿದರೆ ಒಂದು ಮಾರ್ಕ್ಸ್ ಕೊಡ್ತಾರೆ...."

''ಸರಿ ಮಾರ್ಕ್ಸ್ ತಗೊಂಡು ಅದೇನೂ ಮಾಡ್ತೀ...?''

''ಮಾರ್ಕ್ಸ್ ಜಾಸ್ತಿ ತಗೊಂಡೋರಿಗೆ ನಮ್ಮ ಎಜುಕೇಷನ್ನು ಮುಗಿದ ಮೇಲೆ ಕಂಪನಿಯವರೇ ಕೆಲಸ ಕೊಡ್ತಾರಂತೆ ಸಾರ್....'' ಅಂದ!

''ಹಾಗಂತ ಕಂಪನಿಯವರು ಹೇಳಿದಾರಾ...''

''ಇಲ್ಲ ಸಾರ್ ಇಲ್ಲೀಗೆ ಟ್ರೈನಿಂಗ್ ಗೆ ಅಂತ ಕಳಿಸಬೇಕಾದರೆ ನಮ್ಮ ಸಾರು ಹೇಳಿದರು....''

''ಕಂಪನಿಯವರೇ ರೂಮು ಕೊಟ್ಟಿದಾರಾ...?''

''ಇಲ್ಲಾ ಸಾರ್ ನಾವೇ ರೂಮು ಮಾಡಿಕೊಂಡು ಇದೀವಿ... ಕಂಪನಿಯವರು ನಮ್ಮ ಸೇಲ್ಸ್ ನೋಡಿಕೊಂಡು ಮಾರ್ಕ್ಸ್ ಕೊಡ್ತಾರೆ ಅಷ್ಟೇ....''

''ನಿಮಗೆ ಕೆಲಸ ಕೊಟ್ಟೇ ಕೊಡ್ತಾರೆ ಅಂತ ಏನು ಗ್ಯಾರಂಟಿ....?''

ಹುಡುಗನ ಹತ್ತಿರ ಇದಕ್ಕೆ ಉತ್ತರವಿರಲಿಲ್ಲ. ಬೆಂಗಳೂರಿನ ಹುಡುಗರಿಗೆ ಈ ರೀತಿಯಾಗಿದ್ದರೆ ಅವರ ಪ್ರತಿರೋಧ ಹೇಗಿರುತ್ತಿತ್ತು ಎಂದು ಮನಸ್ಸು ಓಡಿತು.

ಗ್ರಾಮೀಣ ಪ್ರದೇಶದ ಹುಡುಗರನ್ನು ಈ ರೀತಿ ತಮ್ಮ ಮಾರಾಟಕ್ಕೆ ಉಪಯೋಗಿಸಿಕೊಳ್ಳುತ್ತಿರುವ ಬೆಂಗಳೂರಿನ ಬಿಸಿನೆಸ್‌ಮನ್ನುಗಳ ಜಾಣ್ಮೆ... ಛೆ! ''ನಿಮ್ಮನ್ನು ಯಾರು ಇಂಥಹ ಕಂಪನಿಗಳಿಗೆ ಕಳಿಸೋದೂ...'' ''ನಮ್ಮ ಕಾಲೇಜಿನವರೇ ಕಳಿಸ್ತಾರೆ ಸಾರ್...'' ಅಂದ ಹುಡುಗ!

ಯಾರೋ ಸಾರು ಹುಡುಗರಿಗೆ ಸಖತ್ ಬೇಸ್ತು ಕೊಟ್ಟಿದಾನೆ ಅನಿಸಿತು. ''ಎಷ್ಟು ಜನ ಬಂದಿದೀರಾ ತಿಪಟೂರಿನಿಂದ...?''

ಹಳ್ಳಿಗಾಡಿನ ಹುಡುಗರಿಗೆ ಹೀಗೆ ಆಸೆ ತೋರಿಸಿ ಬಿಟ್ಟಿ ಕೆಲಸ ಮಾಡಿಸಿಕೊಳ್ಳುವ ಬೆಂಗಳೂರಿನ ನಮ್ಮವರ ಜಾಣ್ಮೆ ಬಗ್ಗೆ ಎಷ್ಟು ಸಂತೋಷ ಹುಟ್ಟಿತು, ಅಂತೀರಿ. ಅಂಗಡಿಯವರಿಂದ ಈ ಹುಡುಗರನ್ನು ಈ ಮಾರಾಟದ ಕೆಲಸಕ್ಕೆ ಬಿಟ್ಟಿರೋ ಕಾಲೇಜುಗಳ ಮೇಷ್ಟ್ರುಗಳು ಎಂತಹ ಖುಷಿ ಕೊಟ್ಟರು ಅಂತೀರೀ....

ಹದಿನೆಂಟು ಇಪ್ಪತ್ತರ ಹುಡುಗರಿಗೆ ಇಲ್ಲದ ಆಸೆ ಹಚ್ಚಿ ಈ ಮಾರಾಟದ ಕೆಲಸ ಮಾಡಿಸುತ್ತಿದ್ದಾರೆ ಎಂದರೆ ಅವರೆಷ್ಟು ಖಿಲಾಡಿಗಳು ಇರಬಹುದು ಅಂತ ಇಡೀ ಮೇಷ್ಟರ ಕುಲದ ಬಗ್ಗೆ ಹೆಮ್ಮೆ ಅನಿಸಿತು! ಹೀಗೆ ಯೋಚಿಸುತ್ತಿರುವಷ್ಟರಲ್ಲಿ ಹುಡುಗ ''ಬರ್ತೀನಿ ಸಾರ್, ಇನ್ನೂ ಎರಡು ಮಾರ್ಕ್ಸ್ ಸಿಕ್ಕಿಲ್ಲ...'' ಅಂತ ಹೊರಟಿತು.

ಯಾವ ಕಾಲೇಜೇ ಆಗಲೀ ಯಾವ ಮೇಷ್ಟ್ರೇ ಆಗಲಿ ಅಥವಾ ಯಾವುದೇ ಸಭ್ಯ ಸಮಾಜವಾಗಲೀ ಈ ಮಟ್ಟಕ್ಕೆ ಇಳೀಬೇಕು ಅಂದರೆ ನಮಗೆ ಏನಾಗಿದೆ ಅಂತ ಚಿಂತಿಸೋದಕ್ಕೆ ನಾನೇನು ಮಠದ ಸ್ವಾಮೀನೇ? ಈ ಜಗತ್ತೇ ತಮಗೆ ಮೋಸ ಮಾಡಲೆಂದೇ ಇದೆ ಎಂಬ ಭಾವನೆಯನ್ನು ಮಕ್ಕಳು ಚಿಕ್ಕವರಾಗಿದ್ದಾಗಲೇ ಮೂಡಿಸಲು ಇಂಥಹ ಪ್ರಯತ್ನ ಅಗತ್ಯ....!

ಹೀಗೊಂದು ಪ್ರಸಂಗ

- ಸುಜಾತ ರಾಜಣ್ಣ

ಕಳೆದ ಜೂನ್ ಜುಲೈ ತಿಂಗಳುಗಳಲ್ಲಿ ನನ್ನ ಪತಿ ರಾಜ ಮತ್ತು ನನಗೆ ಮೆಡಿಟರೇನಿಯನ್ ಸಮುದ್ರದ ಮೇಲೆ ಎರಡು ವಾರಗಳ ಕಾಲ ಹಡಗಿನಲ್ಲಿ ಪ್ರವಾಸ ಮಾಡುವ ಅವಕಾಶ ಒದಗಿಬಂದಿತ್ತು. ನಮ್ಮ ಜೊತೆಗೆ ರಾಜನ ತಮ್ಮಂದಿರು, ತಂಗಿ ಮತ್ತು ಅವರೆಲ್ಲರ ಗಂಡ ಹೆಂಡತಿಯರು. ಒಟ್ಟು ಎಂಟು ಜನ. ನಮಗೆಲ್ಲಾ ಇದೊಂದು ಅಪರೂಪದ ಪ್ರವಾಸ.

'ಸೆಲೆಬ್ರಿಟಿ' ಎಂಬ ಹನ್ನೆರಡು ಅಂತಸ್ತಿನ ಸುಂದರ ಹಡಗಿನಲ್ಲಿ ಕುಳಿತು, ಸಮಾನ ಮನಸ್ಕರಾದ ನಾವೆಲ್ಲ ಪ್ರಪಂಚವನ್ನೇ ಮರೆತು ನಾವೇ ನಾವಾಗಿ ವಿಜೃಂಭಿಸಿದೆವು. ಮಕ್ಕಳಂತೆ ಕುಣಿದು ಕುಪ್ಪಳಿಸಿ ವಿನಾಕಾರಣ ನಕ್ಕು ನಲಿದೆವು. ಆತ್ಮೀಯತೆ ಹಾಸು ಹೊಕ್ಕಾಗಿತ್ತು. ಪ್ರತಿದಿನ ಜೆಕೂಸಿಯಲ್ಲಿ ಕುಳಿತು ಸಾಮೂಹಿಕ ಬಿಸಿನೀರಿನ ಸ್ನಾನ. ಆಮೇಲೆ ಒಟ್ಟಿಗೆ ಊಟಮಾಡಿ, ಬಾಲ್ಯದ ನೆನಪುಗಳನ್ನು ಮೆಲಕು ಹಾಕುವ ಸುಯೋಗ. ರಾಜನ ಕೊನೆಯ ತಮ್ಮ ಪ್ರಸನ್ನನ ಮದುವೆಯ ಬೆಳ್ಳಿಯ ಹಬ್ಬವನ್ನು ಈ ರೀತಿ ಹಡಗಿನ ಮೇಲೆ ಆಚರಿಸಬೇಕೆಂದು ನಾವೆಲ್ಲಾ ಒಟ್ಟಾರೆ ನಿರ್ಧರಿಸಿ ಈ ಪ್ರವಾಸವನ್ನು ಯೋಜಿಸಿದ್ದೆವು.

ಪ್ರವಾಸದ ಪ್ರಾರಂಭದಲ್ಲಿ ನಾವು ನಾಲ್ಕು ಜನ ಭಾರತದಿಂದ ಇನ್ನು ಮಿಕ್ಕವರು ಅಮೆರಿಕೆಯಿಂದ ಪ್ರಯಾಣ ಮಾಡಿ ಬಾರ್ಸಿಲೋನಾದಲ್ಲಿ ಇಳಿದೆವು.

ಸುಸಜ್ಜಿತವಾದ ಪಂಚತಾರಾ ಹೋಟೆಲಿನಲ್ಲಿ ಅತಿ ಉತ್ಸಾಹದಿಂದ ಇಳಿದುಕೊಂಡೆವು. ಭಾರತೀಯರ ಪುಣ್ಯಕ್ಕೆ ಈಗ ಯುರೋಪಿನ ಎಲ್ಲಾ ಕಡೆ ಒಂದೇ ಹಣ ಚಲಾವಣೆಯಲ್ಲಿದೆ. ಪ್ರತಿಯೊಂದು ದೇಶದಲ್ಲಿ ಆ ದೇಶದ ಹಣಕ್ಕೆ ಡಾಲರ್‌ಗಳನ್ನು ಬದಲಾಯಿಸಿಕೊಳ್ಳುವ ಪ್ರಮೇಯ ಈಗ ಇಲ್ಲ. ಭಾರತದಿಂದಲೇ ಯಾರೋ ಹಣವನ್ನು ಟಿಕೆಟ್ಟಿನ ಜೊತೆ ತೆಗೆದುಕೊಂಡು ಬಿಟ್ಟರೆ ವಾಪಸ್ಸು ಬರುವವರೆಗೆ ಅದೇ ಹಣ. ನಮ್ಮ 56 ರೂಪಾಯಿಗೆ ಒಂದು ಯೂರೋ ಅಂದರೆ ಮೂರು ಯೂರೋ ಕೊಟ್ಟು ಕಾಫಿ ಕುಡಿಯಲು ಸಹ ಯೋಚಿಸಬೇಕಾದ ಪರಿಸ್ಥಿತಿ.

ಆದರೂ ಬೆಂಗಳೂರಿನಿಂದ ಬಾರ್ಸಿಲೋನಾದವರೆಗೆ Lufthansa ವಿಮಾನದಲ್ಲಿ ಸುರಕ್ಷಿತವಾಗಿ ಸೇರಿದೆವು ಎಂದು ಮನೆಯವರಿಗೆ ತಿಳಿಸಬೇಕೆಂದು ರಾಜ ಮತ್ತು ನಾನು ನಮ್ಮ ಹೋಟೆಲ್‌ಗೆ ಸಮೀಪದ ತಬಾಚಿ ಅಂಗಡಿಗೆ (ಅಂದರೆ ತಂಬಾಕು - ಸಿಗರೇಟು ಮಾರುವ ಅಂಗಡಿ ಅಲ್ಲಿ ಸ್ಟಾಂಪ್, ಟೆಲಿಫೋನ್ ಕಾರ್ಡ್ ಎಲ್ಲಾ ಸಿಗುತ್ತೆ) ಟೆಲಿಫೋನ್ ಕಾರ್ಡ್ ಖರೀದಿಸಲು ಹೋದೆವು. ಹಣವನ್ನು ಅತ್ಯಂತ ಜಾಗರೂಕತೆಯಿಂದ ಇಟ್ಟುಕೊಳ್ಳಬೇಕೆಂದೂ, ಇಟಲಿಯಲ್ಲಂತೂ ನಡೆದುಕೊಂಡು ಹೋಗುತ್ತಿದ್ದಾಗ ನಿಮಗೆ ಗೊತ್ತಾಗದ ಹಾಗೆ, ನೀವು ಹಾಕಿಕೊಂಡಿರುವ ಪ್ಯಾಂಟನ್ನೇ ಕದ್ದುಬಿಡುತ್ತಾರೆ ಎಂದು ಹೇಳಿ

ಒಂದು Money Belt ನ್ನು ನಮ್ಮ ಅಳಿಯ ರಾಜನಿಗೆ ಕೊಟ್ಟು ಸೊಂಟಕ್ಕೆ ಕಟ್ಟಿ ಕಳುಹಿಸಿದ್ದರು.

ಟೆಲಿಫೋನ್ ಕಾರ್ಡ್‌ನ್ನು ಕೊಳ್ಳಲು Money Belt ನಿಂದ ಹಣ ತೆಗೆದಾಗ ಕಣ್ಣಿನಿಂದ ನೋಡಿ ಬೇಕಾದಷ್ಟೆ ಹಣ ತೆಗೆದುಕೊಳ್ಳಲು ರಾಜನ ಹೊಟ್ಟೆ ಸ್ವಲ್ಪ ಮುಂದೆ ಇದ್ದಿದ್ದರಿಂದ ಸುಮ್ಮನೆ ಕೈ ಹಾಕಿದಾಗ 75 ಯೂರೋ ಹೊರಕ್ಕೆ ಬಂತು. ಅದರಲ್ಲಿ 5 ಯೂರೋ ತಬಾಚಿ ಅಂಗಡಿಗೆ ಕೊಟ್ಟು ಮಿಕ್ಕಿದ್ದನ್ನು ಒಳಗಿಟ್ಟುಕೊಳ್ಳುವ ಮೊದಲೇ ಒಬ್ಬರು ಹಿಂದಿನಿಂದ ಇವರ ಬಳಿ ಬಂದು ನಿಮ್ಮ ಹಣ Double ಆಗುತ್ತೆ ಬನ್ನಿ ಆಟ ಆಡಿ ಅಂತ ಬಲವಂತ ಮಾಡಿ ಇವರ ಕೈಯಿಂದ ಹಣ ಕಸಿದುಕೊಂಡರು. ಎರಡು ರೋಡಿನ ಮಧ್ಯೆ ದೊಡ್ಡ ಮೈದಾನದಂತಹ ಜಾಗ ಇದೇ ಸುಪ್ರಸಿದ್ಧ Rambla ರಾಮ್‌ಬ್ಲಾ ಪ್ರವಾಸಿಗರ ಅತ್ಯಂತ ಮೆಚ್ಚಿನ ರಸ್ತೆ ಇದು. ಇಲ್ಲಿ ರಾತ್ರಿಯೇ ಇಲ್ಲ ಸದಾಕಾಲ ಗಿಜಿಗುಟ್ಟುವ ಪ್ರವಾಸಿಗರು. ವೇಷಧರಿಸಿ ಭಿಕ್ಷೆ ಬೇಡುವ ರೀತಿ, ಪಕ್ಷಿಗಳಿಂದ ಸರ್ಕಸ್ ಮಾಡಿಸುವ ಮೋಜು, ಬಗೆ ಬಗೆಯ ದೊಂಬರಾಟ ಇವೆಲ್ಲಾ ಈ ರಾಮ್‌ಬ್ಲಾ ಮೈದಾನದ ಆಕರ್ಷಣೆಗಳು. ಹಾಗೂ ರಸ್ತೆಯ ಬದಿಯಲ್ಲೇ ಕುಳಿತು ಕಾಫಿ, ಟೀ ಹಾಗೂ ಊಟ, ತಿಂಡಿಯ ಸಮಾರಾಧನೆ ಇಲ್ಲಿ ಸದಾಕಾಲ.

ಹಣ ಕಸಿದುಕೊಂಡ ಆ ವ್ಯಕ್ತಿ ಚುರುಕಿನಿಂದ ಹಣವನ್ನು ಆಟದಲ್ಲಿ ತೊಡಗಿಸಿ ಅವರೇ ಆರಿಸಿದ ಒಂದು ಮುಚ್ಚಿದ್ದ ಡಬ್ಬದ ಕೆಳಗೆ ಏನೂ ಇಲ್ಲ ನಿಮ್ಮ ಹಣ ಹೋಯಿತು ಅಂತ ಹೇಳಿ ಇವರ ಹಣದ ಬೆಲ್ಟ್‌ನ ಹೊಟ್ಟೆ ಗುಂಡಾಗಿದ್ದದ್ದನ್ನು ನೋಡಿ ಇನ್ನೊಂದು ಆಟ ಆಡಿ ಎಂದು ದುಂಬಾಲು ಬಿದ್ದರು. ಬೇಡ ಅಂತ ಅಂಗಲಾಚಿ ಅವರಿಂದ ಬಿಡಿಸಿಕೊಂಡು ರಸ್ತೆ ದಾಟುವಷ್ಟರಲ್ಲಿ ಸಾಕಾಯಿತು.

ಅಷ್ಟರಲ್ಲೇ ನಮ್ಮನ್ನು ಗಮನಿಸುತ್ತಿದ್ದ ಇನ್ನೊಬ್ಬ ಮುಂದೆ ಬಂದು ನಾನು ಪೋಲೀಸ್ ನಿಮಗೆ ಸಹಾಯ ಮಾಡುತ್ತೇನೆ ಎಂದ. ಅವನು ಪಡ್ಡೆ ಹುಡುಗರಂತೆ ಬಣ್ಣಹೋದ ಜೀನ್ಸ್, ಕೆಂಪು ಬಣ್ಣದ ಟೀ ಶರ್ಟ್ ತೊಟ್ಟಿದ್ದ. ಮೊದಲೇ ಗಾಬರಿಯಾಗಿದ್ದ ನಮಗೆ ಅವನು ತನ್ನ ಪರಿಚಯದ ಕಾರ್ಡ್ ತೋರಿಸಿದರೂ ಅವನೂ ಆ ಗ್ಯಾಂಗಿನವರಲ್ಲಿ ಒಬ್ಬನೆಂದು ನಿಮ್ಮ ಸಹಾಯ ನಮಗೆ ಬೇಡ ಎಂದು ಎಷ್ಟು ಹೇಳಿದರೂ ಕೇಳದೆ ಆ ಪಡ್ಡೆ ಹುಡುಗ ತನ್ನ Mobile ತೆಗೆದು ಯಾರಿಗೋ ಫೋನ್ ಮಾಡಿಬಿಟ್ಟ.

ಆ ಊರಿನಲ್ಲಿಲ್ಲದ ನಮ್ಮ ಊರಿನ ಎಲ್ಲಾ ದೇವರಿಗೂ ಮನಸ್ಸಿನಲ್ಲೇ ಪ್ರಾರ್ಥನೆ ಸಲ್ಲಿಸಿದ್ದಾಯಿತು. ದೇವರೆ ನಮ್ಮ ಊರಿನಲ್ಲಿ ಎಷ್ಟೊಂದು ದೇವರುಗಳು ಯಾರನ್ನು ಪ್ರಾರ್ಥಿಸಲಿ, ಯಾರನ್ನು ಬಿಡಲಿ ಇರುವ ಸಮಯ ಸ್ವಲ್ಪ ಒಬ್ಬರನ್ನು ಪ್ರಾರ್ಥಿಸಿ ಇನ್ನೊಬ್ಬರನ್ನು ಬಿಟ್ಟರೆ, ಇನ್ನೊಬ್ಬರಿಗೆ ಸಿಟ್ಟು ಬಂದು ಇಬ್ಬರೂ ಜಗಳವಾಡುತ್ತಾ ಒಬ್ಬರೂ ಬರದಿದ್ದರೆ ಎಂದು ವಿಪರೀತ ಭಯವಾಯಿತು. ಹೇಗಾದರಾಗಲಿ ಗಣೇಶ ಆದರೆ ವಿಘ್ನಾಧಿಪತಿ, ಎಲ್ಲಾ ಗಣಗಳ ಪತಿ ಎಂದು ಧೈರ್ಯ ಮಾಡಿ ಎಲ್ಲಾ ಪ್ರಾರ್ಥನೆಯನ್ನೂ

ಗಣೇಶನ ಕಡೆಗೆ ತಿರುಗಿಸಿ, ಗಣೇಶನಿಗೆ ಕಡುಬಿನ ಆಮಿಷ ಒಡ್ಡಿ ತಕ್ಷಣ ಪುಷ್ಪಕ ವಿಮಾನದಲ್ಲಿ ಬರಬೇಕೆಂದು ಬೇಡಿಕೆ ಸಲ್ಲಿಸಿದ್ದಾಯಿತು.

ಪುಷ್ಪಕ ವಿಮಾನದ ಬದಲು ಪೋಲೀಸ್ ಸಮವಸ್ತ್ರ ತೊಟ್ಟಿದ್ದ ನಾಲ್ವರು ಧಾಂಡಿಗರು ಪೋಲೀಸ್ ಫಲಕ ಹೊತ್ತಿದ್ದ ಕಾರಿನಲ್ಲಿ ಬಂದೇ ಬಿಟ್ಟರು. ಬಲವಂತ ಮಾಡಿ ರಾಜನನ್ನು ಕಾರಿಗೆ ಹತ್ತಿಸಿಕೊಂಡರು. ನಾನು ಬೇಡವೆಂದು ರಾಜನನ್ನು ಹೊರಗೆ ಎಳೆದುಕೊಂಡೆ. ಅವರು ಮತ್ತೆ ಒಳಗೆ ಎಳೆದುಕೊಂಡರೆ, ನಾನು ಮತ್ತೆ ಹೊರಕ್ಕೆ ಈ ಅವಾಂತರದಲ್ಲಿ ರಾಜನ ಕೈ ಉಳುಕಿತು. ಈ ಬಾರಿ ಅವರು ಚಾಣಾಕ್ಷತೆಯಿಂದ ರಾಜನನ್ನು ಕಾರಿನ ಒಳಕ್ಕೆ ಎಳೆದುಕೊಂಡು Door Lock ಮಾಡಿಬಿಟ್ಟರು. ಕಾರು ಹೊರಟೇ ಹೋಯಿತು. ನಾನು ಹೊರಗೆ ಉಳಿದುಬಿಟ್ಟೆ.

ನನ್ನ ಮನೋ ಮಂದಿರದಲ್ಲಿ ಹಡಗಿನ ಪ್ರಯಾಣದ ಇತಿಶ್ರೀಯನ್ನು ನೋಡಿದ್ದಾಯಿತು. ಎಲ್ಲಾ ಹಣವನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದ ರಾಜನನ್ನು ಅವರು Kidnap ಮಾಡಿದ್ದಾರೆಂದುಕೊಂಡು ತಕ್ಷಣ ಹೋಟೆಲ್ಲಿಗೆ ಓಡಿದೆ. ಅಕಸ್ಮಾತ್ ಅವರು ಪೋಲೀಸ್‌ನವರೇ ಆಗಿದ್ದರೂ ಸಹ ಜೂಜಾಡುವವರೊಂದಿಗೆ ಸಹಕರಿಸಿದಿರಿ ಅಂತ ಹೇಳಿ ಅವರ Money Belt ನೊಳಗಿದ್ದ Pass port ನ ಕಸಿದುಕೊಂಡು ನಮ್ಮ ಟಿ.ವಿ. ಧಾರಾವಾಹಿಗಳಲ್ಲಿ ತೋರಿಸುವ ತರಹ ಒಳಗೆ ಹಾಕಬಹುದು ಅಂತ ಗಾಬರಿಯಾಯಿತು.

ರಾಜನ ತಮ್ಮನ ಮಗಳು ಶಿಲ್ಪಾ ನಮ್ಮನ್ನೆಲ್ಲಾ ಭೇಟಿಯಾಗಲೆಂದು ಅಮೆರಿಕಾದಿಂದ ಬಾರ್ಸಿಲೋನಾಗೆ ಬಂದಿದ್ದಳು. ಅವಳನ್ನು ಕರೆದುಕೊಂಡು ನಮ್ಮ ಹೋಟೆಲಿಗೆ ಸುಮಾರು ಒಂದು ಮೈಲಿ ದೂರದಲ್ಲಿದ್ದ ಪೋಲೀಸ್ ಠಾಣೆಗೆ ಓಡುತ್ತಾ ಹೋದೆ.

ಪೋಲೀಸ್ ಸ್ಟೇಷನ್ ತಲುಪುವವರೆಗೆ ಮನಸ್ಸು ಎಲ್ಲೆಂದರಲ್ಲಿ ಲೀಲಾಜಾಲವಾಗಿ ಒಳ್ಳೆಯ ವೇಗದಿಂದ ಓಡುತ್ತಿತ್ತು. ಇನ್ನು ಮಿಕ್ಕ 6 ಜನರಿಗೆ ಈ ವಿಷಯ ತಿಳಿದರೆ ಇಷ್ಟೊಂದು ಹಣ ಖರ್ಚುಮಾಡಿ ಹಡಗಿನ ಪ್ರಯಾಣಕ್ಕೆ ಕಾತರಿಸಿ ಬಂದಿದ್ದ ಅವರಿಗೆ ಎಷ್ಟು ಬೇಜಾರಾಗುತ್ತದೆಯೋ ಎಂಬ ಚಿಂತೆ ರಾಜನ ಅಪಹರಣಕ್ಕಿಂತ ದೊಡ್ಡದಾಗಿ ಕಾಡಿಸಿತು.

ಪೋಲೀಸ್ ಸ್ಟೇಷನ್ ತಲುಪಿದಾಗ ಹೊರಗೆ ಪ್ರತಿಮೆಯಂತೆ ನಿಂತಿದ್ದ ಒಬ್ಬ ಪೇದೆಗೆ ಒಬ್ಬ Indian ಒಳಗಿದ್ದಾರಾ ಎಂದು ಕೇಳಿದೆ. ಒಳಗೆ ಹೋಗಿ ವಿಚಾರಿಸಿ ಎಂದಷ್ಟೇ ಹೇಳಿ ಮತ್ತೆ ಪ್ರತಿಮೆಯಂತೆ ನಿಂತ. ಆಫೀಸರ್ ರೂಮಿನ ಹೊರಗೆ ನಿಂತಿದ್ದ ಮತ್ತೊಬ್ಬ ಪೇದೆಯಿಂದ ಅಪ್ಪಣೆ ಪಡೆದು ಒಳಗೆ ಹೋದಾಗ ರಾಜ ಏನನ್ನೋ ಬರೆಯುತ್ತಾ

ಆಫೀಸರ್ ಮುಂದೆ ಕೂತಿದ್ದು ನೋಡಿ ನನ್ನ ಕಣ್ಣನ್ನು ನಾನೇ ನಂಬಲಿಲ್ಲ. ದಾರಿಯುದ್ದಕ್ಕೂ ಪ್ರಯಾಣವನ್ನು ನಿಲ್ಲಿಸಿ ಊರಿಗೆ ಹೇಗೆ ವಾಪಸ್ ಹೋಗಬೇಕೆಂದು ನಕ್ಷೆ ತಯಾರಿಸಿದ್ದ ನನಗೆ ಅಲ್ಲಿ ಕೂತಿದ್ದು ರಾಜನೋ ಅಥವಾ ನನ್ನ ಕಣ್ಣೇ ನನಗೆ ಮೋಸ ಮಾಡುತ್ತಿದೆಯೋ ಗೊತ್ತಾಗದೆ ಕಣ್ಣು ಮಿಟುಕಿಸದೆ ನೋಡುತ್ತಾ ನಾನೂ ವಿಗ್ರಹದಂತೆ ನಿಂತುಬಿಟ್ಟೆ.

ರಾಜ Complaint ಬರೆದು ಕೊಟ್ಟಾದ ಮೇಲೆ ಆ ಪೋಲೀಸ್ ಆಫೀಸರ್ ರಾಜ ಕಳೆದುಕೊಂಡಿದ್ದ 70 ಯೂರೋಗಳನ್ನು ಅವರ ಕೈಗೆ ವಾಪಸ್ಸು ಕೊಟ್ಟರು. ಬಹಳ ಜನ ವಿಹಾರಾರ್ಥವಾಗಿ ಬಾರ್ಸಿಲೋನಾಗೆ ಬರುತ್ತಾರೆ ಇಲ್ಲಿ ಅವರನ್ನು ವಂಚಿಸುವ ದೊಡ್ಡ ಜಾಲವೇ ಇದೆ. ಆದರೆ ಹಣ ಕಳೆದುಕೊಂಡವರು ಯಾರೂ ಪೋಲೀಸರಿಗೆ ಸುದ್ದಿ ಮುಟ್ಟಿಸಿ Written Complaint ಕೊಡುವುದಿಲ್ಲ ಹಾಗಾಗಿ ನಾವು ಅವರನ್ನು ಹಿಡಿದರೂ ಅವರ ಮೇಲೆ ಕೇಸ್ ಹಾಕುವುದಕ್ಕಾಗುವುದಿಲ್ಲ ನೀವು ನಮ್ಮೊಡನೆ ಸಹಕರಿಸಿದ್ದು ತುಂಬಾ ಒಳ್ಳೆಯದಾಯಿತು ಎಂದು ಕೈ ಕುಲುಕಿದರು. ನೀವು ದುಡ್ಡು ಕಳೆದುಕೊಂಡಾಗಲೇ ಮಫ್ತಿಯಲ್ಲಿದ್ದ ನಮ್ಮವರು ಅವರನ್ನು ಹಿಡಿದರು. ನೀವು Complaint ಕೊಡದಿದ್ದರೆ ನಾವೇನೂ ಮಾಡುವುದಕ್ಕಾಗುತ್ತಿರಲಿಲ್ಲ ಎಂದರು.

ದಪ್ಪ ಮೂಗಿನ ಆ ಆಫೀಸರ್ ಪುಷ್ಪಕ ವಿಮಾನದಲ್ಲಿ ಬಂದಿಳಿದ ಗಣೇಶನೇ ಇರಬಹುದು ಎಂದು ಅವರನ್ನೇ ನೋಡುತ್ತಾ ಅವರ ಕೈ ಹಿಡಿದುಕೊಂಡು ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸಿದೆ.

ಮತ್ತೆ ಕಣ್ಣಿನಲ್ಲಿ ಹಡಗಿನ ಪ್ರಯಾಣದ ಕನಸನ್ನು ಕಾಣುತ್ತಾ ಮೆಡಿಟರೇನಿಯನ್ ಸಮುದ್ರದ ಮೇಲೆ ಬಾರ್ಸಿಲೋನದಲ್ಲಿ ಆಗಲೇ ಬಂದು ನಿಂತಿದ್ದ ಸೆಲೆಬ್ರಿಟಿ ಹಡಗನ್ನು ಧನ್ಯತೆಯಿಂದ ನೋಡುತ್ತಾ ತನ್ಮಯಳಾದೆ.

ವಿದ್ಯೆ - ಭಾಷೆ

ಕೊಟ್ಟಿದ್ದು ತನಗೆ
ಬಚ್ಚಿಟ್ಟಿದ್ದು ಪರರಿಂಗೆ
ಹೌದು - ವಿದ್ಯೆ, ಭಾಷೆ ಕೊಟ್ಟಿದ್ದು
ತನಗೆ - ಹಣ ಕೊಟ್ಟಿದ್ದು ಪರರಿಂಗೆ

- ಶರಣು ಎರೇಕೊಪ್ಪ

ಸತ್ಯವಂತರಿಗಿದು ಕಾಲವಲ್ಲ!

- ನೀರಗುಂದ ಕೇಶವಮೂರ್ತಿರಾವ್

ಪುರಂದರ ದಾಸರ ಕಾಲದಲ್ಲೂ ಸತ್ಯವಂತರ ಸ್ಥಿತಿ ಚೆನ್ನಾಗಿರಲಿಲ್ಲವೆಂದು ಕಾಣುತ್ತದೆ. ಆದ್ದರಿಂದಲೇ ದಾಸರು ''ಸತ್ಯವಂತರಿಗಿದು ಕಾಲವಲ್ಲ'' ಎಂದು ಹಾಡಿರಬೇಕು.

ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ, ಸಿನಿಮಾ, ದೂರದರ್ಶನದ ಕೋರ್ಟ್ ದೃಶ್ಯಗಳಲ್ಲಿ ಆರೋಪಿ ಎನಿಸಿಕೊಂಡವರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ''ಸತ್ಯವನ್ನೇ ಹೇಳುತ್ತೇನೆ. ಸತ್ಯವನ್ನಲ್ಲದೇ ಬೇರೇನನ್ನೂ ಹೇಳುವುದಿಲ್ಲ. ನಾನು ಹೇಳುವುದೆಲ್ಲಾ ಸತ್ಯ'' ಎಂದು ಭಗವದ್ಗೀತೆಯನ್ನು ಮುಟ್ಟಿಸಿ ವಿಚಾರಣೆಗೆ ಪ್ರಾರಂಭಿಸುವ ಪದ್ಧತಿಯನ್ನು ಓದಿ, ನೋಡಿ (ಕೆಲವೊಮ್ಮೆ ಅನುಭವಿಸಿ)ದವರಿಗೆ ಇದೆಲ್ಲಾ ಮಾಮೂಲು. ಆನಂತರ ಸತ್ಯಸಂಗತಿಯ ವಿಚಾರ ಬೆಳಕಿಗೆ ಬರುವುದಿಲ್ಲ. ಸತ್ಯದಲ್ಲಿ ಸುಳ್ಳಿನ ಅಂಶವೇ ಜಾಸ್ತಿ ಎನ್ನುವುದು ಎಲ್ಲರಿಗೂ ಗೊತ್ತಲ್ಲ!

ಹಿಂದೆ ಧರಣಿ ಮಂಡಲ ಮಧ್ಯದೊಳಗೆ ಮೆರೆಯುತ್ತಿದ್ದ ಕರ್ನಾಟಕ ದೇಶದ ಕಳಿಂಗನೆಂಬ ಗೊಲ್ಲಗೌಡನ ''ಪುಣ್ಯ ಕೋಟಿ' ಎಂಬ ಗೋವಿನ ಹಾಡು ಶಾಲೆಯಲ್ಲಿ ಓದಿದ್ದು ಕನ್ನಡ ಬಲ್ಲವರಿಗೆ ಮರೆಯಲು ಸಾಧ್ಯವೇ ಇಲ್ಲ -

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಬಂಧು ಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ
ಪರಮಾತ್ಮನು!

ಎಂದು 'ಪುಣ್ಯಕೋಟಿ'ಯ ಮಾತು ಇಂದಿನ 'ಹಸುವಿನ ಮೇಲಿನ ಹಗರಣದಂತಹ ಅನೇಕರ ಆರೋಪಗಳನ್ನು ಎದುರಿಸುತ್ತಿರುವ ನಮ್ಮ ರಾಜಕಾರಣಿ ಆರೋಪಿಗಳಿಗೆ ಸತ್ಯವನ್ನು ಮರೆ ಮಾಚುವ ಬುದ್ಧಿಬಂದಿದೆಯೋ ಮೇ. ಭ.ಗೊ! (ಮೇಲಿರುವ ಭಗವಂತನಿಗೇ ಗೊತ್ತು!)

''ಸಾವಿರ ಸುಳ್ಳು ಹೇಳಿ ಒಂದು ಮದುವೆ'' ಮಾಡಬಹುದು ಎಂಬುದೊಂದು ಗಾದೆ. ಆದರೆ ಒಂದು ಸತ್ಯ ಹೇಳಿದರೆ ಮದುವೆಯಾಗುವ ಸಂದರ್ಭವೇ ಬರುವುದಿಲ್ಲವೇನೂ?

ಸತ್ಯವನ್ನು ಕುರಿತ ಮಂಕು ತಿಮ್ಮನ ವಾಣಿ ಇಂತಿದೆ-
ಸತ್ಯವೆಂಬುದದೇನು ಸೈನಿಕನ ಜೀವನದಿ?।
ಕತ್ತಿಯವನಿಗೆ ಸತ್ಯವದರಿಂದೆ ಧರ್ಮ॥
ಭುಕ್ತಿ ಸುಪ್ತಿಗಳ ವಿಭವಂಗಳವನಿಗೆ ಮಿಥ್ಯೆ।
ಸಾರ್ಥಕತೆಯಿಂದ ಸತ್ಯ - ಮಂಕುತಿಮ್ಮ॥

(ಸತ್ಯವೆಂಬುದು ಸೈನಿಕನ ಬದುಕಿನಲ್ಲಿ ಏನು? ಅವನ ಪಾಲಿಗೆ ಕೈಯಲ್ಲಿರುವ ಖಡ್ಗವೇ ಸತ್ಯ ಅದೇ ಧರ್ಮ. ಅದರಿಂದ ದೊರಕುವ ಎಲ್ಲವೂ ಮಿಥ್ಯೆ. ಸಾರ್ಥಕ ಸೇವೆಯಿಂದ ಮಾತ್ರ ಸತ್ಯ ದೊರಕುವುದು)

ತಾವು ಕಂಡ ಸತ್ಯವನ್ನು ಕುರಿತು ಕಾಲಕಾಲಕ್ಕೆ ಕವಿ - ದಾರ್ಶನಿಕರು ಎಷ್ಟೆಲ್ಲಾ ಹೇಳಿದ್ದರೂ ಸುಳ್ಳಿಗಿರುವ ಪ್ರಾಮುಖ್ಯ ಸತ್ಯಕ್ಕಿಲ್ಲವೇನೊ? ಇತಿಹಾಸಗಳಲ್ಲೂ ಇದನ್ನು ಗಮನಿಸಬಹುದು. ಮಹಾಭಾರತದಲ್ಲಿ ಧರ್ಮರಾಯನಂಥ ಸತ್ಯಸಂಧನ ಬಾಯಲ್ಲಿ ''ಅಶ್ವತ್ಥಾಮೋ ಹತಃ...'' ಎಂದು ಸುಳ್ಳನ್ನಾಡಿಸಿದ ಕೃಷ್ಣನ ತಂತ್ರ ಎಲ್ಲರಿಗೂ ಗೊತ್ತಿರುವುದೆ.

ಸತ್ಯವನ್ನೇ ನಂಬಿದ ಸತ್ಯ ಹರಿಶ್ಚಂದ್ರ ಮಹಾರಾಜನ ಬಾಯಲ್ಲಿ ಸುಳ್ಳನ್ನಾಡಿಸುವ ವಿಶ್ವಾಮಿತ್ರನ ಸಾಹಸ ಕೊನೆಗೂ ನೆರವೇರುವುದಿಲ್ಲ. ಆದರೆ ಹರಿಶ್ಚಂದ್ರ ಪಟ್ಟ ಪಾಡು? ಕೊನೆಗೆ ಸುಡುಗಾಡನ್ನು ಕಾಯುವ ಕೆಲಸವೂ ಅವನ ಪಾಲಿಗೆ ಬಂತು ಅಂತ್ಯದಲ್ಲಿ ಸತ್ಯಕ್ಕೆ ಜಯ!

ನಾವು ಸ್ಕೂಲಿನಲ್ಲಿ ಓದಿದ ಕಥೆಯ ನೆನಪೊಂದು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. "God see the Truth but wait" (ದೇವರು ಸತ್ಯವನ್ನು ನೋಡುತ್ತಾನೆ. ಆದರೆ ಕಾಯುತ್ತಾನೆ)

ಹರಿಶ್ಚಂದ್ರ ನಾಟಕದೊಳಗಿನ ಸ್ವಾರಸ್ಯ ಪ್ರಸಂಗ ಹೀಗಿದೆ - ವಿಶ್ವಾಮಿತ್ರರ - ಶಿಷ್ಯ ನಕ್ಷತ್ರಿಕರ ಸಂಭಾಷಣೆ

ನ: ಗುರುಗಳೆ ಹರಿಶ್ಚಂದ್ರ ಸುಳ್ಳು ಹೇಳ್ಬಿಟ್ನಲ್ಲ!

ವಿ: (ಆಶ್ಚರ್ಯದಿಂದ) ಯಾವಾಗ? ಎಲ್ಲಿ? ಏನ್ಬಗಳ್ದ ಒದರು

ನ: ಅದೇ ಗುರುಗಳೆ, ನಿಮ್ಮನ್ನು 'ಎರಡನೆಯ ಶಿವ, ಕರುಣಾಮಯಿ, ದಯಾನಿಧಿ...' ಅಂತ ನಿಮ್ಮಲ್ಲಿಲ್ಲದ ಗುಣಗಳನ್ನೆಲ್ಲ ಬಣ್ಣಿಸಿ ಹೊಗಳಿದನಲ್ಲಾ ಇದು ಸುಳ್ಳು ಹೇಳಿದ ಹಾಗಲ್ಲವೇ ಗುರುಗಳೆ?

ಎಂದಾಗ ''ಅಧಿಕ ಪ್ರಸಂಗಿ'' ಎಂದು ವಿಶ್ವಾಮಿತ್ರ ಬಯ್ಯುತ್ತಾನೆ!

''ಸತ್ಯವಂತರ ಸಂಗವಿರಲು ತೀರ್ಥವೇತಕೆ'' ಎಂದು ಕನಕದಾಸರು ಪ್ರಶ್ನಿಸಿದರೆ, ಸರ್ವಜ್ಞ ಕವಿ ತನ್ನ ವಚನದಲ್ಲಿ

ಸತ್ಯರ ಒಡನಾಟ ಮತ್ತೆ ಸಕ್ಕರೆ ತುಪ್ಪ
ಸತ್ಯವಿಲ್ಲದವರ ಒಡನಾಟ ಚೇಳಿಯು
ಒತ್ತಿಯಂತಿಮದು ಸರ್ವಜ್ಞ

ಎಂದು ಸತ್ಯವಂತರ ಕುರಿತು ಹೇಳುತ್ತಾನೆ

ವೇದಿಕೆಯ ಮೇಲಿನ ಭಾಷಣಕಾರರು ಸತ್ಯದ ಕುರಿತು ಹೇಳುವಾಗ ''.... ಸತ್ಯವಂತರನ್ನು ಇಂದು ಹಗಲು ಹೊತ್ತಿನಲ್ಲಿ ದೀವಟಿಗೆ ಹಿಡಿದು ಹುಡುಕಿದರೂ ಸಿಗುವುದಿಲ್ಲ'' ಎಂದು ಘಂಟಾಘೋಷವಾಗಿ ನುಡಿಯುವುದನ್ನು ಕೇಳಿರಬಹುದು.

''ಸತ್ಯವೆಂಬುದು ಎಲ್ಲಿದೆ? ನಾನು ಬಹು ಕಾಲದಿಂದಲೂ ಹುಡುಕುತ್ತಿದ್ದೇನೆ. ಸಿಕ್ಕಿಲ್ಲ; ದಯವಿಟ್ಟು ಅದು ಎಲ್ಲಿ ಸಿಗುತ್ತದೆಂಬುದನ್ನು ತಿಳಿಸುವಿರಾ?'' ಎಂಬ ಸುಧಾ ಪತ್ರಿಕೆಯ ''ನೀವು ಕೇಳಿದಿರಿ'' ಪ್ರಶ್ನೆಗೆ ಉತ್ತರ ಭೂತರಾಗಿದ್ದ ''ಬೀchiಯವರು'' ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶ ಪುಟ ಐದುನೂರ ಐದು ಎಡೆಗಡೆ ಭಾಗ ಕಟ್ಟ ಕಡೆಯ ಸಾಲು'' ಎಂದು ಉತ್ತರಿಸುತ್ತಾರೆ!

ಶ್ರೀ ಸಾಮಾನ್ಯನೊಬ್ಬ ಸತ್ಯ ನುಡಿದರೆ ಏನಾಗಬಹುದು? ಹನಿಗವಿ ದುಂಡಿರಾಜರ 'ಸತ್ಯ' ಎಂಬ ಹನಿಗವಿತೆ ಹೀಗೆನ್ನುತ್ತದೆ -

ಸತ್ಯ ಹೇಳಿದರೆ
ಆಗುವುದಿಷ್ಟೆ
ಮನೆಯಲ್ಲಿ ಗದ್ದಲ
ಹರತಾಳ
ನೆರೆಮನೆ ಚೆಲುವೆಗೆ
ಚಲುವೆ ಎಂದರೆ
ಹೆಂಡತಿ ಸುಮ್ಮನೆ
ಇರತಾಳ?

ಈ ವಿಚಾರವಾಗಿ 'ಉತ್ತರ ಭೂಪ' ಬೀchi ಯವರು ತಮ್ಮ ಪ್ರಶ್ನಕಾರ ಕೇಳಿದ ''ತಾವು ಯಾವಾಗಲೂ ನಿಜವನ್ನೇ ಹೇಳುತ್ತೀರಾ?'' ಎಂಬ ಪ್ರಶ್ನೆಗೆ ''ಎಲ್ಲಿ? ಮನೆಯಲ್ಲಿಯೆ? ನಾನು ಕೈ ಹಿಡಿದವಳ ಶತ್ರು ಅಲ್ಲ, ನಿಜ ಹೇಳಿ ದುಃಖ ಕೊಡಲು'' ಎಂದು ಉತ್ತರಿಸಿದ್ದಾರೆ!

ಮಹಾತ್ಮಗಾಂಧಿಯವರು ತಮ್ಮ ಆತ್ಮಕಥೆಯನ್ನು ''ನನ್ನ ಸತ್ಯಾನ್ವೇಷಣೆ'' (ಅನುವಾದ: ಗೊರೂರು) ಎಂದು ಕರೆದುಕೊಂಡಿದ್ದಾರೆ.

ಜಾರ್ಜ್ ಬರ್ನಾಡ್‌ಷಾರವರು ''ಸತ್ಯವನ್ನು ನುಡಿಯುವುದೇ ನಾನು ಮಾಡುವ ತಮಾಷೆಯ ರೀತಿ. ಇದಕ್ಕಿಂತಲೂ ತಮಾಷೆಯಾದದ್ದು ಪ್ರಪಂಚದಲ್ಲಿ ಇನ್ನಿಲ್ಲ (my way of joking is tell the truth, its is the funniest joke in the world) ಎನ್ನುತ್ತಾರೆ!

'ಸತ್ಯಂವದ - ಧರ್ಮಂಚರ', 'ಸತ್ಯಮೇವ ಜಯತೇ', (ಒಂದು ರೂಪಾಯಿ ನಾಣ್ಯದಲ್ಲಿ) ಸತ್ಯಂ-ಶಿವಂ-ಸುಂದರಂ (ದೂರದರ್ಶನ) ಮುಂತಾದ ಸತ್ಯಕ್ಕೆ ಸಂಬಂಧಿಸಿದ ಘೋಷ ವಾಕ್ಯಗಳನ್ನು ಹಲವೆಡೆ ಕಾಣಬಹುದು!

'ಸತ್ಯವಂತರಿಗಿದು ಕಾಲವಲ್ಲ'ದಿದ್ದರೂ ಸಹ ಸತ್ಯಕ್ಕೇ ಜಯವಾಗಲಿ ಆಶಿಸೋಣ!

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST 36 6th Main Road. Malleswaram. Bangalore - 560 003.
PRINTED AT RAVI GRAPHICS 49 4th Cross. SSI Area. Rajajinagar. Bangalore - 560 010
Editor: M. SHIVAKUMAR